ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 224 Pages : 4 Price : 3.00 Wednesday October 11, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಅಕ್ಟೋಬರ್ 11 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ:** ವಾರ್ಡ್ ನಂ. 35, 34, 30 ಮೂರುಶಿಳ್ಳಿನ ವಕಾರ, ಡಿಪೋ ಹಿಂದಿನ ಭಾಗ, ಕುಂಚಿ ಕೊರವರ ಓಣಿ, ಬಸವೇಶ್ವರ ಶಾಲೆಯ ಹಿಂದಿನ ಭಾಗ -ಮುಂದಿನ ಭಾಗ, ಶಿವಾನಂದ ಗಾರ್ಡನ್, ವಾರ್ಡ್ ನಂ. 1 ಎಸ್ ಎಂ ಕೃಷ್ಣ ನಗರ ಕೆಳಗಿನ ಭಾಗ- ಮೇಲಿನ ಭಾಗ, ವಾರ್ಡ್ ನಂ 22 ಗಂಗಿಮಡಿ ಲೀಡ್ಕರ್ ಬಡಾವಣೆ, ಕನ್ನಡ ಶಾಲೆಯ ಹತ್ತಿರ ದೊಡ್ಡ ಮಸೀದಿ ಹಿಂದಿನ ಭಾಗ- ಮುಂದಿನ ಭಾಗ, ವಾರ್ಡ್ ನಂ 10, 9 ಮಸೂತಿ ಲೈನ್, ಹೆಲ್ತ್ ಕ್ಯಾಂಪ್, ನವೋದಯ ಲೈನ್, ಚಿದಂಬರ ಲೈನ್, ಶಿರಹಟ್ಟಿ ಓಣಿ, ಮಜ್ಜಿಗಿ ಓಣಿ, ಉಳಿದ ಕೆಲವು ಭಾಗಗಳು.

ವಾರ್ಡ್ ನಂ. 8 ಕಲಬುರ್ಗಿ ಓಣಿ, ಹಿರೇಮಠದವರ ಲೈನ್, ಮಲ್ಲ ರಾಯನ ಕಟ್ಟಿ, ಗಣಪತಿ ಗುಡಿ ಉಳಿದ ಕೆಲವು ಭಾಗಗಳು. ವಾರ್ಡ್ ನಂ. 28 ಕೃಷ್ಣ ಡಿವಿಜನ್ ಲೈನ್, ಸೋಲಾ ಪಟ್ಟಿ ಲೈನ್, ಅಪಾರ್ಟ್ಮೆಂಟ್ ಕಟ್ಟಿ, ಟೀಚರ್ ಲೈನ್, ಎಸ್ ಎಸ್ ಪಾಟೀಲರ ಲೈನ್, ವಾರ್ಡ್ ನಂ 27 ಸಂಕಣ್ಣವರ ಲೇಔಟ್ ಉಳಿದ ಕೆಲವು ಭಾಗಗಳು. ವಾರ್ಡ್ ನಂ. 5, 6 ಪನಿ ಬಂದರವರ ಲೈನ್, ತಟ್ಟೆಯವರ ಲೈನ, ರಂಗಪ್ಪಜ್ಜನ ಮಠ, ವಾರ್ಡ್ ನಂ. 16, 21 ಸುಣ್ಣದ ಬಟ್ಟಿ, ರಹಿಮತ್ ನಗರ, ಕುಂಬಾರ ಓಣಿ, ಕುಷ್ಟರೋಗ ಕಾಲೋನಿ, ಅಂಬೇಡ್ಕರ್ ನಗರ, ಅಬ್ಬಿಗೇರಿ ಲೈನ್, ಗುಡದೂರ ಸ್ವಾಮಿ ಎಡಭಾಗ- ಬಲಭಾಗ

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಲೋಡರ್, ಕ್ಲೀನರ್‌ಗಳ ನೇಮಕಾತಿ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಪುರಸಭೆಗಳ (ನಗರಸಭೆ, ಪುರಸಭೆಗಳು, ಪಟ್ಟಣ ಪಂಚಾಯತ ಪೌರಕಾರ್ಮಿಕರ/ಲೋಡರ್ಸ್ ಮತ್ತು ಕ್ಲೀನರ್ಸ್ ನೇಮಕಾತಿ) (ವಿಶೇಷ) ನಿಯಮಗಳು 2021/2022ರ ರೀತ್ಯಾ ಗದಗ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರಪಾವತಿ/ದಿನಗೂಲಿ/ಹೊರಗುತ್ತಿಗೆ ಆಧಾರ ಮೇಲೆ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರು/ಲೋಡರ್ಸ್ ಮತ್ತು ಕ್ಲೀನರ್ಸ್‌ಗಳಲ್ಲಿ ಒಟ್ಟು 141 ಜನ ಪೌರಕಾರ್ಮಿಕರನ್ನು ಹಾಗೂ 08 ಜನ ಲೋಡರ್ಸ್ ಮತ್ತು 04 ಜನ ಕ್ಲೀನರ್ಸ್‌ಗಳು ಸೇರಿ ಒಟ್ಟು 153 ಜನರನ್ನು ಮಾನ್ಯ ಜಿಲ್ಲಾಧಿಕಾರಿಗಳು ನೇರ ನೇಮಕಾತಿ ಮಾಡಿ ಆದೇಶಿಸಿದ್ದಾರೆ ಎಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2023-24ನೇ ಸಾಲಿನಲ್ಲಿ ಡಿ.ದೇವರಾಜ ಅರಸು ಸ್ವಯಂ ಉದ್ಯೋಗ ವೈಯಕ್ತಿಕ ಸಾಲ ಯೋಜನೆ, ಗಂಗಾ ಕಲ್ಯಾಣ ನೀರಾವರಿ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ, ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಸ್ವಯಂ ಉದ್ಯೋಗ ಸಾಲ ಯೋಜನೆ, ಸ್ವಾತಂತ್ರ್ಯ ಅಮೃತ ಮಹೋತ್ಸವ ಮುನ್ನಡೆ ಯೋಜನೆ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಅಕ್ಟೋಬರ್ 31 ಆಗಿದ್ದು, ಸೇವಾಸಿಂಧು ತಂತ್ರಾಂಶದ ಮುಖಾಂತರ ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಜಿಲ್ಲಾ ಆಡಳಿತ ಭವನ, ರೂ.ನಂ. 202, 2 ನೇ ಮಹಡಿ, ಹುಬ್ಬಳ್ಳಿ ರಸ್ತೆ ,ಗದಗ ಇಲ್ಲಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್ www.dbcdc.karnataka.gov.in ಇಲ್ಲಿ ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

### ಸಂವಿಧಾನ ಪೀಠಿಕೆ, ಕಾರ್ಯಗಳ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮಕ್ಕೆ ಸಚಿವ ಎಚ್.ಕೆ ಪಾಟೀಲ ಚಾಲನೆ

# ನಮ್ಮ ಸಂವಿಧಾನ ಶ್ರೇಷ್ಠ, ಶಕ್ತಿಯುತ



> ದೇಶದಲ್ಲಿ ಬಡತನ ಶಾಪದಂತಿದ್ದು, ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿದ್ದ 1.10 ಲಕ್ಷಕ್ಕೂ ಹೆಚ್ಚು ಕುಟುಂಬಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವು ಮೇಲೆತ್ತುವ ಕ್ರಾಂತಿಕಾರಕ ಬದಲಾವಣೆ ಮಾಡಿದೆ. ಸಂವಿಧಾನವನ್ನು ಕಥೆ ಪುಸ್ತಕದಂತೆ ಭಾವಿಸದೇ ಪ್ರತಿಯೊಬ್ಬರೂ ಸಂವಿಧಾನದ ಸದಾಶಯಗಳಂತೆ ನಡೆದುಕೊಳ್ಳುವ ಮೂಲಕ ದೇಶ ಕಟ್ಟುವ ಕಾರ್ಯವಾಗಬೇಕು. ಸಂವಿಧಾನ ಪೀಠಿಕೆ ಓದಿ, ಅದರಂತೆ ನಡೆದುಕೊಂಡು ಶ್ರೇಷ್ಠ ವ್ಯಕ್ತಿಗಳಾಗೋಣ.
>
> **- ಎಚ್.ಕೆ ಪಾಟೀಲ.** ಸಚಿವರು.

■ ವಿಜಯಸಾಕ್ಷಿ ಸುದ್ದಿ, ಗದಗ

ಭಾರತದ ಸಂವಿಧಾನ ಜಗತ್ತಿನಲ್ಲಿಯೇ ಶ್ರೇಷ್ಠವಾದದ್ದು. ರಾಷ್ಟ್ರದ ಬದುಕು ಹೇಗಿರಬೇಕು, ಜನಸೇವೆ, ನಮ್ಮ ಹಕ್ಕುಗಳ ಕುರಿತು ನಮ್ಮ ಸಂವಿಧಾನದ ಪೀಠಿಕೆಯಿಂದ ಅರಿತುಕೊಂಡು ಸಂವಿಧಾನದ ಸದಾಶಯಗಳನ್ನು ಈಡೇರಿಸಲು ಮುಂದಾಗಬೇಕು ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್. ಕೆ ಪಾಟೀಲ ನುಡಿದರು.

ನಗರದ ಡಾ. ಬಿ.ಆರ್ ಅಂಬೇಡ್ಕರ ಭವನದಲ್ಲಿ ಮಂಗಳವಾರ ಜರುಗಿದ ಸಂವಿಧಾನದ ಪೀಠಿಕೆ ಮತ್ತು ಕಾರ್ಯಗಳು ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನ ಕಥೆ ಪುಸ್ತಕ ಅಲ್ಲ ಅದು ನಮ್ಮ ಬದುಕು, ನಮ್ಮ ಹಕ್ಕುಗಳನ್ನು ತಿಳಿಸುವ, ಬಲ ನೀಡುವ ಮಹಾನ್ ಶಕ್ತಿ ಆಗಿದೆ. ವೈವಿಧ್ಯಮಯವಾದ ನಮ್ಮ ನಾಡಿಗೆ ಸಾಮಾಜಿಕ ನ್ಯಾಯ, ಪ್ರತಿಯೊಬ್ಬರಿಗೂ ತಮ್ಮದೇ ಆದ ಹಕ್ಕನ್ನು ನಮ್ಮ ಸಂವಿಧಾನ ನೀಡಿದೆ. 12ನೇ ಶತಮಾನದಲ್ಲಿ ಬಸವಣ್ಣನವರು ಸ್ತ್ರೀ ಸ್ವಾತಂತ್ರ್ಯ ಕುರಿತು ತಿಳಿಸಿದ್ದರು. ಆದರೂ ಮನೆಯ ಹೆಣ್ಣುಮಕ್ಕಳನ್ನು ಮನೆಯಿಂದ ಆಚೆ ಕಳುಹಿಸುತ್ತಿರಲಿಲ್ಲ. ಸಂವಿಧಾನದಲ್ಲಿ ತಿದ್ದುಪಡಿ ತರುವ ಮೂಲಕ ಮೀಸಲಾತಿಯನ್ನು ಜಾರಿಗೊಳಿಸಿ ಮಹಿಳೆಯರ ಕೈಗೆ ಅಧಿಕಾರ ನೀಡಲಾಗಿದೆ.

ನಮ್ಮ ಸಂವಿಧಾನ ಶ್ರೇಷ್ಠ ಹಾಗೂ ಶಕ್ತಿಯುತವಾಗಿದೆ. ಜಾತಿ ವ್ಯವಸ್ಥೆಯಿಂದ ಗಲೀಜು ಆಗಿರುವ ಸಮಾಜವನ್ನು ತಿದ್ದುವ ಕಾರ್ಯ ಆಗಬೇಕಾಗಿದೆ. ಸಮಾಜದಲ್ಲಿ ಇನ್ನೂ ಕೂಡ ಅಸ್ಪೃಶ್ಯತೆ ಜೀವಂತವಾಗಿದ್ದು, ಇದನ್ನು ತೊಡೆದು ಹಾಕುವ ಕಾರ್ಯವಾಗಬೇಕಿದೆ. ಸಮಾಜದಲ್ಲಿ ಸಮಾನತೆ ಬರಲು ಮನಸ್ಸುಗಳು ಕೂಡಬೇಕು. ಈ ಕುರಿತು ಸಂವಿಧಾನದಲ್ಲಿ ಸ್ಪಷ್ಟಪಡಿಸಲಾಗಿದೆ. ಅಸ್ಪೃಶ್ಯತೆ ನಿವಾರಣೆಗೆ ಪಂಚಾಯತಗಳಿಗೆ ಹೆಚ್ಚಿನ ಜವಾಬ್ದಾರಿಗಳನ್ನು ನೀಡಲಾಗಿದೆ. ಸಂವಿಧಾನದ ತಿಳುವಳಿಕೆ ಕೊರತೆಯಿಂದಾಗಿ ಸಮಾಜದಲ್ಲಿ ತಾರತಮ್ಯ ನೀತಿ ಅನುಸರಿಸಲಾಗುತ್ತಿದ್ದು, ಪ್ರತಿಯೊಬ್ಬರೂ ಸಂವಿಧಾನದ ಕುರಿತು ಅರಿತುಕೊಳ್ಳುವದು ಮುಖ್ಯವಾಗಿದೆ. ಸಂವಿಧಾನದಲ್ಲಿ ನೀಡಿರುವ ಹಕ್ಕನ್ನು ಎಲ್ಲರೂ ಪಡೆದುಕೊಳ್ಳುತ್ತಾರೆಯೇ ಹೊರತು ಕರ್ತವ್ಯಗಳನ್ನು ಪಾಲಿಸಲಾಗುತ್ತಿಲ್ಲ. ಈ ಕುರಿತು ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ ಎಂದರು.

ರೋಣ ಶಾಸಕ ಜಿ.ಎಸ್ ಪಾಟೀಲ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷಗಳು ಗತಿಸಿದ್ದರೂ ದೇಶದಲ್ಲಿ ಅಷ್ಟೊಂದು ಸಾಧನೆ ಆಗಿಲ್ಲ. ದೇಶದ ಏಕತೆಯನ್ನು ಸಂವಿಧಾನ ಕರೆದೊಯ್ಯುತ್ತಿದೆ. ಸಮಾಜ ಸುಧಾರಣೆಯಲ್ಲಿ ಮಹಿಳೆಯರ ಪಾತ್ರ ಅತೀ ಪ್ರಮುಖವಾಗಿದ್ದು, ಗಾಂಧೀಜಿ ಅವರ ಗ್ರಾಮ ಸ್ವರಾಜ್ಯದ ಕನಸನ್ನು ನನಸಾಗಿಸಲು ಎಲ್ಲರೂ ಸಂವಿಧಾನವನ್ನು ಅರಿತು ಅದರಂತೆ ನಡೆದುಕೊಳ್ಳಬೇಕು ಎಂದು ನುಡಿದರು.

ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ ಮಾತನಾಡಿ, ನ್ಯಾಯಾಂಗ, ಕಾಂಯರ್ಾಂಗ ▸▸3ನೇ ಪುಟಕ್ಕೆ

### ತಾ.ಪಂ ಸಭಾಭವನದಲ್ಲಿ ಜರುಗಿದ 'ಜನತಾದರ್ಶನ' ಕಾರ್ಯಕ್ರಮದಲ್ಲಿ ಡಿಸಿ ವೈಶಾಲಿ ಎಂ.ಎಲ್

# ಅರ್ಜಿಗಳನ್ನು ನಾನೇ ಖುದ್ದಾಗಿ ಪರಿಶೀಲಿಸುತ್ತೇನೆ

■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಸರಕಾರದ ನಿರ್ದೇಶನದಂತೆ ಪ್ರತಿ 15 ದಿನಗಳಿಗೊಮ್ಮೆ ತಾಲೂಕಾ ಮಟ್ಟದಲ್ಲಿ ಜನತಾದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ. ಸಾರ್ವಜನಿಕರ ಸಮಸ್ಯೆಗಳ ಅಹವಾಲುಗಳನ್ನು ಸ್ವೀಕರಿಸಿ ಅವರ ಅಲೆದಾಟ ತಪ್ಪಿಸುವುದು ಜನತಾದರ್ಶನ ಕಾರ್ಯಕ್ರಮದ ಮೂಲ ಉದ್ದೇಶವಾಗಿದೆ ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಹೇಳಿದರು.




> **ಸಮಸ್ಯೆಗಳನ್ನು ಸಮಾಧಾನದಿಂದ ಆಲಿಸಿದ ಡಿಸಿ**
>
> ಸಭೆಯಲ್ಲಿ ಕೆಲ ಇಲಾಖೆಯ ಅಧಿಕಾರಿಗಳು ಗೈರು ಉಳಿದಿದ್ದರೂ ಸಹ ಸಾರ್ವಜನಿಕರಿಂದ ಬಂದ ಸಮಸ್ಯೆಗಳ ಅರ್ಜಿಗಳನ್ನು ಪಡೆದು, ಅರ್ಜಿದಾರರೊಂದಿಗೆ ಸಮಾಧಾನವಾಗಿ ಸಮಸ್ಯೆಗಳನ್ನು ಆಲಿಸಿ, ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಂದ ಸ್ಪಷ್ಟನೆಯನ್ನು ಕೇಳುತ್ತಿದ್ದರು. ಜಿಲ್ಲಾ ಮಟ್ಟದ ಕೆಲವು ಅಧಿಕಾರಿಗಳೊಂದಿಗೆ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಮೊಬೈಲ್ ಮೂಲಕ ಸಂಪರ್ಕಿಸಿ, ಮಾಹಿತಿಯನ್ನು ಪಡೆದುಕೊಂಡು ಅರ್ಜಿದಾರರಿಗೆ ಉತ್ತರಿಸುತ್ತಿದ್ದರು.

ಅವರು ಮಂಗಳವಾರ ಶಿರಹಟ್ಟಿಯ ತಾ.ಪಂ ಸಭಾಭವನದಲ್ಲಿ ಜರುಗಿದ ಜನತಾದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ 51 ಅರ್ಜಿಗಳು ಸ್ವೀಕೃತವಾಗಿದ್ದು, ಇವೆಲ್ಲವುಗಳನ್ನು ಕೂಲಂಕುಷವಾಗಿ ನಾನೇ ಖುದ್ದಾಗಿ ಪರಿಶೀಲಿಸುತ್ತೇನೆ. ಎಲ್ಲ ಅರ್ಜಿಗಳು ಆನ್‌ಲೈನ್‌ನಲ್ಲಿ ದಾಖಲಾಗುವುದರಿಂದ ತ್ವರಿತಗತಿಯಲ್ಲಿ ವಿಲೇವಾರಿ ಮಾಡಿ ಜನತೆಯ ಸಮಸ್ಯೆಗಳನ್ನು ದೂರ ಮಾಡಲಾಗುವುದು. ಕಾರ್ಯಕ್ರಮವನ್ನು ನೆಪಕ್ಕೆ ಮಾತ್ರ ಸೀಮಿತಗೊಳಿಸದೆ ಕಾರ್ಯರೂಪಕ್ಕೆ ತರಲಾಗುವುದು. ಸಭೆಗೆ ಗೈರು ಉಳಿದ ಅಧಿಕಾರಿಗಳಿಗೆ ನೋಟೀಸ್ ನೀಡಲಾಗುವುದು ಎಂದರು.

**3 ಸಾವಿರ ಲಂಚ ಕೇಳುತ್ತಿರುವ ಸಿಬ್ಬಂದಿ:** ಮಜ್ಜೂರ ಗ್ರಾಮ ಪಂಚಾಯತಿಯಲ್ಲಿ 27 ಮನೆಗಳು ರೆಡ್ ಝೋನ್‌ನಲ್ಲಿದ್ದು, ಪ್ರತೀ ಫಲಾನುಭವಿಗಳ ಕಡೆಯಿಂದ 3 ಸಾವಿರ ಕೊಟ್ಟರೆ ಅನುದಾನ ಬಿಡುಗಡೆ ಮಾಡುವುದಾಗಿ ಜಿ.ಪಂ ಸಿಬ್ಬಂದಿ ಹೇಳುತ್ತಿದ್ದಾರೆಂದು ಗ್ರಾಮದವರು ಡಿಸಿ ಅವರ ಗಮನಕ್ಕೆ ತಂದರು. ಇದಕ್ಕೆ ಡಿಸಿ ಪ್ರತಿಕ್ರಿಯಿಸಿ, ತಕ್ಷಣವೇ ಮೊಬೈಲ್ ಮೂಲಕ ಲಾಗ್‌ಇನ್ ಆಗಿ, ಎಲ್ಲ ಫಲಾನುಭವಿಗಳಿಗೂ ಅನುದಾನ ಬಿಡುಗಡೆ ಮಾಡುವಂತೆ ಅಧಿಕಾರಿಗೆ ಸೂಚನೆ ನೀಡಿದರು.

**20 ಕೆರೆ ತುಂಬಿಸುವ ಯೋಜನೆ ಕಾರ್ಯಗತಗೊಳಿಸಲು ಮನವಿ:** ಶಿರಹಟ್ಟಿ ತಾಲೂಕಿನ 20 ಕೆರೆಗಳನ್ನು ತುಂಬಿಸುವ ಯೋಜನೆ ನೆನೆಗುದಿಗೆ ಬಿದ್ದಿದ್ದು, ಇದನ್ನು ತ್ವರಿತಗತಿಯಲ್ಲಿ ಕಾರ್ಯಗತಗೊಳಿಸಬೇಕೆಂದು ವಡವಿ ಗ್ರಾಮದ ಪ್ರವೀಣಗೌಡ ಪಾಟೀಲ, ರಾಜೀವರೆಡ್ಡಿ ಬಮ್ಮನಕಟ್ಟಿ ಡಿಸಿ ಅವರ ಗಮನಕ್ಕೆ ತಂದರು. ಇದಕ್ಕೆ ಡಿಸಿ ಅವರು ಕರ್ನಾಟಕ ನೀರಾವರಿ ನಿಗಮದ ಅಧಿಕಾರಿಗಳೊಂದಿಗೆ ಮೊಬೈಲ್ ಮೂಲಕ ಚರ್ಚಿಸಿ, 3 ತಿಂಗಳು ಸಮಯಾವಕಾಶ ಕೇಳಿದ್ದಾರೆ. ಜೊತೆಗೆ ತಹಸೀಲ್ದಾರ, ತಾಪಂ ಇಓ, ಕೆಎನ್‌ಎನ್‌ಎಲ್ ಅಧಿಕಾರಿಗಳು ಜಂಟಿ ಸಮೀಕ್ಷೆ ನಡೆಸಿ ಈ ಬಗ್ಗೆ ವರದಿ ಸಲ್ಲಿಸಲು ಸೂಚಿಸುತ್ತೇನೆ ಎಂದರು.

**ಎಸಿ ಆದೇಶ ಪಾಲಿಸಿ:** 5 ತಿಂಗಳುಗಳ ಹಿಂದೆ ಉಪವಿಭಾಗಾಧಿಕಾರಿಗಳ ಆದೇಶದ ಪ್ರಕಾರ ಹಕ್ಕುಪತ್ರ ವಿತರಿಸುತ್ತಿಲ್ಲ, ಕಚೇರಿಗೆ ಅಲೆದಾಡಿದರೂ ಪ್ರಯೋಜನವಾಗಿಲ್ಲವೆಂದು ಸುಗ್ನಳ್ಳಿ ಗ್ರಾಮದ ರಮೇಶ ಭಾವನೂರ ಡಿಸಿ ಅವರ ಗಮನಕ್ಕೆ ತಂದರು. ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಡಿಸಿ ಅವರು, ಎಸಿ ಆದೇಶವನ್ನು ಪಾಲಿಸುತ್ತಿಲ್ಲವೆಂದರೆ ಬೇರೇನು ಮಾಡುತ್ತೀರಿ ಎಂದು ಶಿರಸ್ತೇದಾರರನ್ನು ತರಾಟೆಗೆ ತೆಗೆದುಕೊಂಡರಲ್ಲದೆ, ಕೂಡಲೇ ಎಸಿ ಆದೇಶದ ಪ್ರಕಾರ ಅವರ ಸಮಸ್ಯೆ ಬಗೆಹರಿಸಲು ಸೂಚಿಸಿದರು.

**ಮಜ್ಜೂರ ಕೆರೆ ದುರಸ್ತಿಗೆ ಒತ್ತಾಯ:** ಮಜ್ಜೂರ ಕೆರೆ ▸▸3ನೇ ಪುಟಕ್ಕೆ

### ಪುರಸಭೆ ನಾಮ ನಿರ್ದೇಶನ ಸದಸ್ಯರ ಪಟ್ಟಿ ಭಾಗಶಃ ಅಂತಿಮ

# ಮತ್ತೊಂದು ಸುತ್ತಿನ ರಾಜಕಾರಣದ ಆರಂಭ

■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಪಟ್ಟಣದ ಪುರಸಭೆ ನಾಮ ನಿರ್ದೇಶನ ಸದಸ್ಯರ ಪಟ್ಟಿ ಭಾಗಶಃ ಅಂತಿಮವಾಗಿದ್ದು, ರೋಣ ಶಾಸಕ ಜಿ.ಎಸ್ ಪಾಟೀಲ ಅವರು ಕೆಲ ಮುಖಂಡರ ಪೈಕಿ ಐವರಿಗೆ ಸ್ಥಳೀಯ ಪುರಸಭೆಯ ನಾಮ ನಿರ್ದೇಶನ ಸದಸ್ಯರನ್ನಾಗಿ ನೇಮಕಕ್ಕೆ ಶಿಫಾರಸ್ಸು ಮಾಡಿದ್ದಾರೆ ಎಂಬ ಚರ್ಚೆಗಳು ಕೇಳಿ ಬರುತ್ತಿವೆ.



> ಇತ್ತ ಉಣಚಗೇರಿ ರೈತರ ಪಂಪ್‌ಸೆಟ್‌ಗಳಿಗೆ ನಿರಂತರ ವಿದ್ಯುತ್ ಪೂರೈಕೆ ಬೇಡಿಕೆ ಇಟ್ಟುಕೊಂಡು ಆರಂಭಿಸಿದ ಮುತ್ತಣ್ಣ ಮ್ಯಾಗೇರಿ ಅವರ ನೇತೃತ್ವದ ಹೋರಾಟ ಕಾಂಗ್ರೆಸ್‌ಗೆ ಬಾಗಶಃ ಹೊಸ ಮೈಲೇಜ್ ನೀಡಿತ್ತು. ಇತ್ತ ಸ್ಥಳೀಯ ಕಾಂಗ್ರೆಸ್ ಕಟ್ಟಾಳುಗಳಾದ ಉಮೇಶ ರಾಠೋಡ ಹಾಗೂ ಸಮಂಗಲಾ ಇಟಗಿ ಅವರನ್ನು ಪಟ್ಟಣದ ಪುರಸಭೆಯ ನಾಮ ನಿರ್ದೇಶನ ಸದಸ್ಯರನ್ನಾಗಿ ನೇಮಕಕ್ಕೆ ಶಾಸಕ ಜಿ.ಎಸ್ ಪಾಟೀಲ ಅವರು ಶಿಫಾರಸ್ಸು ಮಾಡಿದ್ದಾರೆ ಎಂಬ ಚರ್ಚೆಗಳು ಬಲವಾಗಿ ಹರಿದಾಡುತ್ತಿವೆ.

ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ರಚನೆಗೆ ರಾಜ್ಯ ಮಟ್ಟದಲ್ಲಿ ಗ್ಯಾರಂಟಿಗಳ ಮೂಲಕ ಕಾಂಗ್ರೆಸ್ ಪಕ್ಷ ಮತ್ತು ಮುಖಂಡರು ಜನತೆಯ ವಿಶ್ವಾಸ ಗಳಿಸಿದರೆ, ಇತ್ತ ರೋಣ ಮತಕ್ಷೇತ್ರದಲ್ಲಿ ಜಿ.ಎಸ್ ಪಾಟೀಲ ಅವರ ಬಿರುಸಿನ ಪ್ರಚಾರದೊಂದಿಗೆ ಚುನಾವಣೆಯಲ್ಲಿ ಗೆಲುವಿಗಾಗಿಯೇ ತಳಮಟ್ಟದಿಂದ ಪಕ್ಷ ಸಂಘಟನೆಗೆ ಆದ್ಯತೆ ನೀಡಿದ್ದು ಪ್ರಮುಖ ತಂತ್ರವಾಗಿತ್ತು. ಪರಿಣಾಮ, ಚುನಾವಣೆ ಘೋಷಣೆಯಾದ ದಿನದಿಂದ ರೋಣ, ನರೇಗಲ್ ಹಾಗೂ ಪಟ್ಟಣದಲ್ಲಿ ಪಕ್ಷ ಸೇರ್ಪಡೆ ಕಾರ್ಯಕ್ರಮಗಳನ್ನು ಅದ್ಧೂರಿಯಾಗಿ ಆಯೋಜಿಸಿ ಹೊಸ ಅಲೆಯನ್ನು ಸೃಷ್ಟಿಸಲು ಜಿ.ಎಸ್ ಪಾಟೀಲ ನೇತೃತ್ವದ ತಂಡ ಸಕ್ರಿಯವಾಗಿ ಕೆಲಸ ನಿರ್ವಹಿಸಿದ್ದರಿಂದ ಕೆಲ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಕಾಂಗ್ರೆಸ್ ಪಕ್ಷದ ಬಾವುಟವನ್ನು ಹಿಡಿದು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ತಾವೇ ಅಭ್ಯರ್ಥಿ ಎಂಬಂತೆ ಕೆಲಸ ಮಾಡಿದ್ದರು.

ಪರಿಣಾಮ ಪಟ್ಟಣದಲ್ಲಿ ಕಾಂಗ್ರೆಸ್ ಪಕ್ಷವು ಮೊದಲ ಬಾರಿಗೆ ಮುನ್ನಡೆ ಪಡೆದು ಬೀಗಲು ಸಾಧ್ಯವಾಗಿತ್ತು ಎಂಬ ಚರ್ಚೆಗಳು ಸಾರ್ವಜನಿಕ ವಲಯದಲ್ಲಿದೆ. ಇದಕ್ಕೆ ಪುಷ್ಟಿ ನೀಡುವಂತೆ ಪಟ್ಟಣದ ಡಾ.ಅಬ್ದುಲ್ ಕಲಾಂ ಟ್ರಸ್ಟ್ ಅಧ್ಯಕ್ಷ, ವಕೀಲ ರಫೀಕ್ ತೋರಗಲ್ ಅಂದು ಸಿದ್ಧರಾಮಯ್ಯ ಸಮ್ಮುಖದಲ್ಲಿ ▸▸3 ನೇ ಪುಟಕ್ಕೆ

## ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದಿಂದ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದಿಂದ 2023-24ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ನೇರಸಾಲ ಯೋಜನೆ, ಸ್ವಯಂ ಉದ್ಯೋಗ ನೇರಸಾಲ ಯೋಜನೆ, ಗಂಗಾ ಕಲ್ಯಾಣ ಯೋಜನೆ. ( ಈ ಯೋಜನೆಯಲ್ಲಿ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು. ಇತರೇ ಜಿಲ್ಲೆಗಳಲ್ಲಿ ಕನಿಷ್ಠ 2 ಎಕರೆ ಹೊಂದಿರಬೇಕು,) ಅರಿವು-ಶೈಕ್ಷಣಿಕ ನೇರಸಾಲ ಯೋಜನೆ (ಹೊಸತು), ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಸ್ವಯಂ ಉದ್ಯೋಗ ಸಾಲ ಯೋಜನೆ (ವಾಣಿಜ್ಯ ಬ್ಯಾಂಕ್‌ಗಳ ಸಹಯೋಗದೊಂದಿಗೆ)ಗೆ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಸೇವಾ ಸಿಂಧು ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ನವೆಂಬರ್ 3 ಆಗಿರುತ್ತದೆ.

ಅರ್ಜಿ ಸಲ್ಲಿಸುವಾಗ ಅರ್ಜಿದಾರರು ಕಡ್ಡಾಯವಾಗಿ ಆಧಾರ ಕಾರ್ಡ್‌ನಲ್ಲಿರುವಂತೆ ಅರ್ಜಿದಾರರ ಹೆಸರು/ವಿಳಾಸ/ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮತ್ತು ಬ್ಯಾಂಕ್ ಪಾಸ್ ಪುಸ್ತಕಗಳಲ್ಲಿ ತಾಳೆಯಾಗಬೇಕು. ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್: www.kmmd.karnataka.gov.in ರಲ್ಲಿ ಅಥವಾ ನಿಗಮದ ಕೇಂದ್ರ ಕಚೇರಿಯ ದೂರವಾಣಿ/ಸಹಾಯವಾಣಿ ಸಂಖ್ಯೆ:080-22374832 ಮತ್ತು 8050770004 ಅಥವಾ 8050770005, ಜಿಲ್ಲಾ ಕಛೇರಿ ದೂ.ಸಂ: 08372-232327 ಯಿಂದ ಪಡೆಯಬಹುದಾಗಿದೆ.

ಹಾಗೂ ಆನ್‌ಲೈನ ಮೂಲಕ ಸಲ್ಲಿಸಲಾದ ಅರ್ಜಿಗಳನ್ನು ನಿಗಮದ ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಗದಗ ಜಿಲ್ಲೆ ಜಿಲ್ಲಾ ಆಡಳಿತ ಭವನ, ರೂ.ನಂ:202, 2ನೇ ಮಹಡಿ, ಜಿಲ್ಲಾ ಆಡಳಿತ ಭವನ ಕಚೇರಿಗಳಲ್ಲಿ ಪೂರ್ವಾಹ್ನ 10.00ರಿಂದ ಸಂಜೆ 5.30 ರವರೆಗೆ ಸಂಪರ್ಕಿಸಿ ಸಲ್ಲಿಸಬಹುದಾಗಿದೆ.

### ವಿದ್ಯುತ್ ಸರಬರಾಜು ಸಮರ್ಪಕವಾಗಿ ನಿರ್ವಹಿಸಲು ಸಚಿವ ಎಚ್.ಕೆ ಪಾಟೀಲ ಸೂಚನೆ

# ಸಮರ್ಪಕ ವಿದ್ಯುತ್ ಪೂರೈಕೆಗೆ ಕಾರ್ಯಪ್ರವೃತ್ತರಾಗಿ



■ ವಿಜಯಸಾಕ್ಷಿ ಸುದ್ದಿ, ಗದಗ

ಕಳೆದ ನಾಲ್ಕೈದು ದಿನಗಳಿಂದ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುತ್ತಿದ್ದು, ಜಿಲ್ಲೆಯ ಪ್ರತಿ ಗ್ರಾಮಕ್ಕೂ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡುವಂತೆ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್. ಕೆ ಪಾಟೀಲ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜರುಗಿದ ಹೆಸ್ಕಾಂ ಹಾಗೂ ಜಿಲ್ಲಾ ಮಟ್ಟದ ಪ್ರಮುಖ ಇಲಾಖೆಯ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಳೆಯ ಕೊರತೆಯಿಂದಾಗಿ ರಾಜ್ಯದಲ್ಲಿ ಬರಗಾಲ ಘೋಷಣೆಯಾಗಿದೆ. ವಿದ್ಯುತ್ ಉತ್ಪಾದನೆಯಲ್ಲಿಯೂ ಕೊರತೆಯಾಗಿದ್ದು, ಸಮರ್ಪಕ ವಿದ್ಯುತ್ ಪೂರೈಕೆ ಮಾಡಲು ಸರ್ಕಾರದ ಹಂತದಲ್ಲಿ ಪ್ರಯತ್ನ ನಡೆದಿದೆ. ಸಧ್ಯದಲ್ಲೇ ವಿದ್ಯುತ್ ಖರೀದಿಸಿ ಸಮರ್ಪಕ ವಿದ್ಯುತ್ ಪೂರೈಕೆ ಮಾಡಲಾಗವುದು. ಅಲ್ಲಿಯವರೆಗೂ ಸಾರ್ವಜನಿಕರು, ರೈತ ಸಮುದಾಯ ಸಹನೆಯಿಂದ ಇರುವಂತೆ ಅಧಿಕಾರಿಗಳು ಮನವರಿಕೆ ಮಾಡಿಕೊಡುವಂತೆ ತಿಳಿಸಿದರು.

ರೋಣ ಶಾಸಕ ಜಿ.ಎಸ್ ಪಾಟೀಲ ಮಾತನಾಡಿ, ರೈತರ ಹೊಲಗಳಿಗೆ ಪದೇ ಪದೇ ವಿದ್ಯುತ್ ವ್ಯತವ್ಯಯವಾಗುತ್ತಿದೆ. ಈ ಹಿಂದೆ ದಿನದ 24 ಗಂಟೆಯೂ ನಿರಂತರ ವಿದ್ಯುತ್ ಪೂರೈಕೆಯಾಗುತ್ತಿತ್ತು. ಕೂಡಲೇ ಸಮರ್ಪಕ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಳ್ಳುವಂತೆ ಕೋರಿದರು. ▸▸3ನೇ ಪುಟಕ್ಕೆ

## ಸಾಕ್ಷಿ ಸುಭಾಷಿತ

ಧ್ಯೇಯಕ್ಕಾಗಿ ಸಾಯುವುದು ಸುಲಭ, ಆದರೆ ಅದಕ್ಕಾಗಿ ಬದುಕುವುದು ಮಾತ್ರ ಕಷ್ಟ ಸಾಧ್ಯ.

–ಬಾಬಾ ಅಮಟೆ

## ಸಂಪಾದಕೀಯ

### ಮಧ್ಯಪ್ರದೇಶದಲ್ಲಿ ಕರ್ನಾಟಕ ಮಾದರಿ ಫಲಿತಾಂಶ

ದೇಶದಲ್ಲಿ ನಡೆಯುತ್ತಿರುವ ಪಂಚರಾಜ್ಯಗಳ ವಿಧಾನಸಭೆ ಚುನಾವಣೆಗೆ ವೇದಿಕೆ ಸಿದ್ಧವಾಗಿದ್ದು, ಚುನಾವಣೆ ಪೂರ್ವ ಸಮೀಕ್ಷೆಗಳು ಅಚ್ಚರಿಯ ಫಲಿತಾಂಶದ ವರದಿಯನ್ನು ದಾಖಲಿಸಿದೆ.

ಎಬಿಪಿ ನ್ಯೂಸ್– ಸಿ ವೋಟರ್ ಸಮೀಕ್ಷೆಯಲ್ಲಿ ಮಧ್ಯಪ್ರದೇಶ ಮತ್ತು ಛತ್ತೀಸಗಢದಲ್ಲಿ ಕಾಂಗ್ರೆಸ್, ರಾಜಸ್ಥಾನದಲ್ಲಿ ಬಿಜೆಪಿ ಮತ್ತು ತೆಲಂಗಾಣ, ಮಿಜೋರಾಂನಲ್ಲಿ ಅತಂತ್ರ ಸ್ಥಿತಿ ನಿರ್ಮಾಣದ ಭವಿಷ್ಯ ನುಡಿದಿವೆ. ಆದರೂ ಮತದಾರರ ಬರೆಯುವ ಭವಿಷ್ಯ ಬೇರೆಯೇ ಇರಲಿದೆ.

ಆದರೆ ಮಧ್ಯಪ್ರದೇಶದಲ್ಲಿ ಮಾತ್ರ ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಸಾಧ್ಯತೆಗಳು ಸ್ಪಷ್ಟವಾಗುತ್ತಿವೆ. ಅದರಲ್ಲೂ ಆಡಳಿತ ವಿರೋಧಿ ಅಲೆ ಎದುರಿಸುತ್ತಿರುವ ಬಿಜೆಪಿ, ಈ ಬಾರಿ ಅಧಿಕಾರ ಕಳೆದುಕೊಳ್ಳುವುದು ನಿಶ್ಚಿತ ಎನ್ನಬಹುದು.

ಕಳೆದ ನಾಲ್ಕು ಅವಧಿಗೆ ಮುಖ್ಯಮಂತ್ರಿ ಆಗಿರುವ ಶಿವರಾಜ್ ಸಿಂಗ್ ಚವ್ಹಾಣ ಜನರ ವಿಶ್ವಾಸ ಕಳೆದುಕೊಂಡಿದ್ದಾರೆ. ಬಿಜೆಪಿ ಸಹ ಅವರನ್ನು ದೂರ ಇಡುವ ಪ್ರಯತ್ನ ಮಾಡಿದೆ. 19 ವರ್ಷ ಮುಖ್ಯಮಂತ್ರಿಯಾಗಿದ್ದ ಶಿವರಾಜ್ ಸಿಂಗ್ ಅವರಿಗೆ ಕೊನೆ ಕ್ಷಣದಲ್ಲಿ ಟಿಕೆಟ್ ನೀಡಲಾಗಿದೆ. ಅಂದರೆ ವಿಧಾನಸಭೆ ಚುನಾವಣೆ ಅಭ್ಯರ್ಥಿಗಳ 4ನೆ ಪಟ್ಟಿಯಲ್ಲಿ ಶಿವರಾಜ್ ಸಿಂಗ್ ಅವರಿಗೆ ಟಿಕೆಟ್ ಅಂತಿಮಗೊಳಿಸಲಾಗಿದೆ.

ಈ ಎಲ್ಲ ಬೆಳವಣಿಗೆಗಳು ಅವಲೋಕನ ಮಾಡಿದಾಗ ಮಧ್ಯಪ್ರದೇಶದಲ್ಲಿ ಈ ಬಾರಿ ಕಮಲ ಅರಳುವುದು ಅನುಮಾನ. ಒಂದು ವೇಳೆ ಬಿಜೆಪಿ ಅಧಿಕಾರಕ್ಕೆ ಬಂದರೂ ಶಿವರಾಜ್ ಸಿಂಗ್ ಮತ್ತೆ ಮುಖ್ಯಮಂತ್ರಿಯಾಗುವುದು ಸಹ ಅನುಮಾನವೇ. ಇನ್ನೊಂದೆಡೆ ಗ್ಯಾರಂಟಿ, ಉಚಿತ ಕೊಡುಗೆಗಳ ಮೂಲಕ ಕರ್ನಾಟಕದಲ್ಲಿ ಅಧಿಕಾರ ಹಿಡಿದಿರುವ ಕಾಂಗ್ರೆಸ್, ಅದೇ ತಂತ್ರವನ್ನು ಮಧ್ಯಪ್ರದೇಶ ಚುನಾವಣೆಯಲ್ಲೂ ಅನುಸರಿಸುತ್ತಿದೆ. ಜೂನ್ ನಿಂದಲೇ ಪಕ್ಷದ ಪರ ಪ್ರಚಾರ ಆರಂಭಿಸಿರುವ ಪ್ರಿಯಾಂಕಾ ಗಾಂಧಿ, ರಾಹುಲ್ ಗಾಂಧಿ ಅನೇಕ ಗ್ಯಾರಂಟಿ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದಾರೆ.

ಆಡಳಿತ ವಿರೋಧಿ ಅಲೆ ಮಧ್ಯೆ ಕಾಂಗ್ರೆಸ್ ಉಚಿತ ಕೊಡುಗೆಗಳು ಮಧ್ಯಪ್ರದೇಶದ ಜನರ ಗಮನ ಸೆಳೆದಿವೆ. ಕರ್ನಾಟಕ ವಿಧಾನಸಭೆ ಚುನಾವಣೆ ಫಲಿತಾಂಶ ಮಧ್ಯಪ್ರದೇಶ ಚುನಾವಣೆಯಲ್ಲೂ ಮರುಕಳಿಸಬಹುದು ಎಂದು ಅಂದಾಜಿಸಬಹುದಾಗಿದೆ.



ಅ.9ರಂದು ನಡೆದ ಜಿಲ್ಲಾ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಭಾಗವಹಿಸಿದ ಹು.ಸ.ಶಿ.ಸಂಸ್ಥೆಯ ಎಂ. ಎ. ಇನಾಮತಿ ಪ್ರೌಢಶಾಲೆ ಕುರ್ತಕೋಟಿ ವಿದ್ಯಾರ್ಥಿ ಇಮ್ಮಿಯಾಜ್ ಅಣ್ಣಿಗೇರಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ. ಇನ್ನೋರ್ವ ವಿದ್ಯಾರ್ಥಿನಿ ಶಾಹೀನ ಅಣ್ಣಿಗೇರಿ ದ್ವಿತೀಯ ಸ್ಥಾನ ಪಡೆದಿದ್ದಾಳೆ. ಇಬ್ಬರೂ ವಿದ್ಯಾರ್ಥಿಗಳಿಗೆ ಶಾಲಾ ಆಡಳಿತ ಮಂಡಳಿ ಅಧ್ಯಕ್ಷರು ಸದಸ್ಯರು ಶಿಕ್ಷಕರು ಅಭಿನಂದನೆ ಸಲ್ಲಿಸಿದ್ದಾರೆ.



**ಕೋಟುಮಚಗಿ :** ಕುಡಿಯುವ ನೀರಿಗಾಗಿ ಕೊಟುಮಚಗಿ ಗ್ರಾಮ ಪಂಚಾಯಿತಿ ಸದಸ್ಯರಿಂದ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆಯ ಮುಂದೆ ಧರಣಿ ಸತ್ಯಾಗ್ರಹ ನಡೆಸುತ್ತಿದ್ದಾರೆ.

### ಹುಬ್ಬಳ್ಳಿ ಹೆಸ್ಕಾಂ ಅಧೀಕ್ಷಕಿಯ ಸಂಧಾನದ ತರುವಾಯ ಪ್ರತಿಭಟನೆ ಹಿಂಪಡೆದ ರೈತರು

# ರೈತರಿಂದ ಹೆಸ್ಕಾಂ ಗ್ರಿಡ್‌ಗೆ ಮುತ್ತಿಗೆ

■ **ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಕಳೆದ ಒಂದು ವಾರದಿಂದ ವಿದ್ಯುತ್ ವ್ಯತಯವಾಗುತ್ತಿರುವುದನ್ನು ಖಂಡಿಸಿ ನರೇಗಲ್ಲ ಹಾಗೂ ಸುತ್ತಮುತ್ತಲಿನ ಗ್ರಾಮಗಳ ರೈತರು ಸೋಮವಾರ ಹೆಸ್ಕಾಂ ಗ್ರಿಡ್‌ಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ನರೇಗಲ್ಲ ಮಜರೆ ಕೋಚಲಾಪೂರ ಗ್ರಾಮದ ರೈತ ವಿ.ಕೆ ರಡ್ಡೇರ ಮಾತನಾಡಿ ನಮಗೆ ಸತತ ಒಂದು ವಾರದಿಂದ ವಿದ್ಯುತ್ ವ್ಯತಯವಾಗುತ್ತಿದ್ದು, ಮೊದಲೇ ಮಳೆ ಇಲ್ಲದೇ ರೈತ ಕಂಗಾಲಾಗಿದ್ದಾನೆ. ಇಂತಹ ಸಮಯದಲ್ಲಿ ಸರಿಯಾಗಿ ವಿದ್ಯುತ್ ಪೂರೈಕೆಯಾಗದಿದ್ದರೆ ರೈತನ ಪರಿಸ್ಥಿತಿ ಶೋಚನೀಯವಾಗಲಿದೆ ಎಂದು ತಮ್ಮ ಆಕ್ರೋಶ ಹೊರಹಾಕಿದರು.

ಈ ವೇಳೆ ವಿವಿಧ ಇಲಾಖೆ ಅಧಿಕಾರಿಗಳು ಪರಿಸ್ಥಿತಿಯನ್ನು ತಿಳಿಗೊಳಿಸಲು ಎಷ್ಟೇ ಪ್ರಯತ್ನಪಟ್ಟರೂ ಹಿಂದೆ ಸರಿಯದ ಹೋರಾಟಗಾರರು



ಹುಬ್ಬಳ್ಳಿಯ ಹೆಸ್ಕಾಂ ಸುಪರಿಡೆಂಡೆಂಟ್ ಇಂಜಿನಿಯರ್ ಸ್ಥಳಕ್ಕೆ ಬರುವವರೆಗೂ ಹೋರಾಟವನ್ನು ಮುಂದುವರೆಸಿದರು.

ಸಂಜೆ 6 ಗಂಟೆಗೆ ಆಗಮಿಸಿದ ಹುಬ್ಬಳ್ಳಿ ಅಧೀಕ್ಷಕ ಇಂಜಿನಿಯರ್ ಶರಣಮ್ಮ ಜಂಗಿನಮನಿ ಮಾತನಾಡಿ, ನೀವೆಲ್ಲ ನಿಮಗಾಗುವ ಸಮಸ್ಯೆಯನ್ನು ಹೇಳಿಕೊಂಡಿದ್ದೀರಿ. ನಾನೂ ಕೂಡ ಮೇಲಾಧಿಕಾರಿಗಳ ಜೊತೆ ನಿಮ್ಮ ಸಮಸ್ಯೆಯನ್ನು ಚರ್ಚಿಸಿದ್ದೇನೆ. ದಯವಿಟ್ಟು ನಿಮ್ಮ ಹೋರಾಟವನ್ನು ಹಿಂಪಡೆದುಕೊಳ್ಳಿ ಎಂದು ವಿನಂತಿಸಿ, ಲಿಖಿತ ಮಾಹಿತಿ ನೀಡುವ ಮೂಲಕ ಅವರ ಮನವೊಲಿಸುವದರೊಂದಿಗೆ ಹೋರಾಟಕ್ಕೆ ಮಂಗಳ ಹಾಡಿದರು.

ನಾಳೆ ನಮಗೆ ಸೂಕ್ತ ಪರಿಹಾರ ದೊರಕದಿದ್ದಲ್ಲಿ ಮತ್ತೆ ಹೋರಾಟಕ್ಕೆ ಮುಂದಾಗುತ್ತೇವೆ ಎಂದು ತಿಳಿಸಿದ ರೈತರು ಪ್ರತಿಭಟನೆಯನ್ನು ಹಿಂಪಡೆದರು. ಬೆಳಿಗ್ಗೆ 10ಕ್ಕೆ ಪ್ರಾರಂಭವಾದ ಪ್ರತಿಭಟನೆ ರಾತ್ರಿ 7ಕ್ಕೆ ಸುಖಾಂತ್ಯ ಕಂಡಿತು.

ಈ ಸಂದರ್ಭದಲ್ಲಿ ರೋಣ ಇಇ ರವಿಕಿರಣ, ಎಇಇ ಚೇತನಕುಮಾರ ಹಾದಿಮನಿ, ಎಸ್‌ಒ ಮಹಾಂತೇಶ ಮೊರಬದ, ರೈತರಾದ ಮಂಜುನಾಥ ನಾಯ್ಕರ, ರವಿ ಯತ್ನಟ್ಟಿ, ಪ್ರಕಾಶ ನಾಯ್ಕರ, ಕರಬಸಯ್ಯ ಶಿಪೂಜಿ, ವೀರಭದ್ರಪ್ಪ ಬಂಡಿಹಾಳ, ಬಸವರಾಜ ತಳವಾರ, ಶರಣಪ್ಪ ಯಲ್ಲರಡ್ಡಿ, ಸುನೀಲ ಬಸವರಡ್ಡೇರ, ಪ್ರವೀಣ ಹೆಗ್ಗಡದಿನ್ನಿ, ಸಚಿನ್ ಪಾಟೀಲ, ಗಣೇಶ ಬಂಡಿವಡ್ಡರ, ರವಿ ಜಂತ್ಲಿ, ಶರಣಪ್ಪ ಅವರಡ್ಡಿ, ಮಣಿಕಂಠ ಅರಳಿಕಟ್ಟಿ, ಹೇಮಣ್ಣ ನಡವಲಗುಡ್ಡ, ಪ್ರವೀಣ ಹಿರೇಮಠ, ಬಸವರಾಜ ಮಾಳಗಿ, ಪೀರಸಾಬ ನದಾಫ್, ಪ್ರಕಾಶ ನಿಡಗುಂದಿ, ಸೋಮನಗೌಡ ಪಾಟೀಲ, ಚಂದ್ರು ಮಾರನಬಸರಿ, ಶೇಖಪ್ಪ ಲಕ್ಕನಗೌಡ್ರ, ಚನ್ನಬಸಪ್ಪ ಕುಷ್ಟಗಿ, ಶರಣಪ್ಪ ಧರ್ಮಾಯತ, ಶಶಿಧರ ಓದಸೂಮಠ, ರುದ್ರೇಶ ಕೊಟಗಿ, ಶರಣಪ್ಪ ಹಕ್ಕಿ, ಸುನೀಲ ಕಳಕೊಣ್ಣವರ, ಶೇಕಪ್ಪ ಕಮ್ಮಾರ, ವೀರೇಶ ಕಂಬಳಿ, ಬಸಪ್ಪ ಹಾಲವಾರ, ಮಾರುತೆಪ್ಪ ಬಂಡಿವಡ್ಡರ, ಮಹಾಂತೇಶ ಜಂತ್ಲಿ ಹಾಗೂ ನರೇಗಲ್ಲ ಮತ್ತು ಸುತ್ತಮುತ್ತಲ ಗ್ರಾಮಗಳ ರೈತರು ಪಾಲ್ಗೊಂಡಿದ್ದರು.

ಪ್ರತಿದಿನ 7 ಗಂಟೆ ವಿದ್ಯುತ್ ನೀಡಬೇಕು. ನಿಮ್ಮ ಮೇಲಾಧಿಕಾರಿಗಳು ಬಂದು ಪರಿಹಾರ ಒದಗಿಸುವವರೆಗೂ ನಾವು ಪ್ರತಿಭಟನೆಯನ್ನು ಹಿಂಪಡೆಯುವದಿಲ್ಲ ಎಂದು ಪಟ್ಟು ಹಿಡಿದರು. ಅಬ್ಬಿಗೇರಿ ರೈತ ಸಂಗಪ್ಪ ಕುಂಬಾರ ಮಾತನಾಡಿ, ಹೆಸ್ಕಾಂ ಸಿಬ್ಬಂದಿಗಳು ರೈತರಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ. ವಾಣಿಜ್ಯ ಕೇಂದ್ರಗಳಿಗೆ 24 ಗಂಟೆಗಳ ಕಾಲ ವಿದ್ಯುತ್ ಸತತವಾಗಿ ನೀಡುತ್ತಿದ್ದಾರೆ. ರೈತರ ತಾಳ್ಮೆ ಪರೀಕ್ಷಿಸಬೇಡಿ. ಸಮಯಾನುಸಾರ ನಿತ್ಯ 7 ಗಂಟೆ ವಿದ್ಯುತ್ ನೀಡುವವರೆಗೂ ನಾವು ಪ್ರತಿಭಟನೆಯನ್ನು ಹಿಂಪಡೆಯುವದಿಲ್ಲ. ನಮಗೆ ಮನೆಯ ವಿದ್ಯುತ್ ನಿಲ್ಲಿಸಿದರೂ ಪರವಾಗಿಲ್ಲ ಆದರೆ ಹೊಲಗಳಿಗೆ ಮಾತ್ರ ಸರಿಯಾಗಿ ವಿದ್ಯುತ್ ನೀಡಿ ಎಂದು ಎಚ್ಚರಿಸಿದರು.

### ವಿದ್ಯುತ್ ಸಮಸ್ಯೆಯಿಂದ ಬೇಸತ್ತ ರೈತರು | ನಿಯಮಿತವಾಗಿ ತ್ರಿಫೇಸ್ ವಿದ್ಯುತ್ ಪೂರೈಸಲು ಆಗ್ರಹ

# ಹೆದ್ದಾರಿ ತಡೆದು ಪ್ರತಿಭಟನೆ

■ **ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ರೈತರ ಪಂಪ್‌ಸೆಟ್‌ಗಳಿಗೆ ಸಂಪೂರ್ಣವಾಗಿ ವಿದ್ಯುತ್ ಕಡಿತಗೊಳಿಸಿದ ಹಿನ್ನೆಲೆಯಲ್ಲಿ ಪಟ್ಟಣದ ಹೆಸ್ಕಾಂ ಕಚೇರಿಗೆ ವಿವಿಧ ಗ್ರಾಮದ ರೈತರು ಮುತ್ತಿಗೆ ಹಾಕಿ, ರಾಜ್ಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ರೈತ ಹೋರಾಟಗಾರ ವೀರನಗೌಡ ಪಾಟೀಲ ಮಾತನಾಡಿ, ಗ್ರಾಮೀಣ ಭಾಗದಲ್ಲಿ ರೈತರು ತಮ್ಮ ಜಮೀನುಗಳಲ್ಲಿ ಬೆಳೆದ ಫಸಲನ್ನು ಉಳಿಸಿಕೊಳ್ಳುವ ಉದ್ದೇಶದಿಂದ ರಾತ್ರಿಯಿಡೀ ಕಾಯುತ್ತಿದ್ದೇವೆ. ತ್ರೀಫೇಸ್ ವಿದ್ಯುತ್ ಸಮರ್ಪಕವಾಗಿ ಪೂರೈಕೆಯಾಗದೆ ಪರದಾಡುವಂತಾಗಿದೆ. ಅಧಿಕಾರಿಗಳ ಬೇಜವಾಬ್ದಾರಿತನದಿಂದ ನಮಗೆ ಬೇಡಿಕೆಯಷ್ಟು ವಿದ್ಯುತ್ ಸರಬರಾಜು ಆಗುತ್ತಿಲ್ಲ. ತಕ್ಷಣ ಬೇಡಿಕೆಯನ್ನು



ಇಡೇರಿಸಬೇಕು ಎಂದು ಆಕ್ರೋಶ ವ್ಯಕ್ತಪಡಿಸಿರು.

ರೈತ ಹೋರಾಟಗಾರ ವಿಶ್ವನಾಥ ತಾಮ್ರಗುಂಡಿ ಮಾತನಾಡಿ, ಬೇರೆ ತಾಲೂಕಿನಲ್ಲಿ ಹಗಲು 7 ತಾಸು ವಿದ್ಯುತ್ ಸಂಪರ್ಕ ಕೊಡುತ್ತಾರೆ. ಆದರೆ ಮುಂಡರಗಿ ತಾಲೂಕಿನಲ್ಲಿ ಈ ಸಮಸ್ಯೆ ಕಾಡುತ್ತಿದೆ. ಈ ಕುರಿತು ಹೆಸ್ಕಾಂ ಕಚೇರಿಗೆ ರೈತರು ಕರೆ ಮಾಡಿ ಮಾಹಿತಿ ಕೇಳಿದರೆ, ವಿದ್ಯುತ್ ಕೊರತೆ ಇದೆ ಎಂದು ಸುಳ್ಳು ಮಾಹಿತಿ ಒದಗಿಸುತ್ತಾರೆ ಎಂದು ಆರೋಪಿಸಿದರು.

ರೈತ ಸಂಘದ ಅಧ್ಯಕ್ಷ ಶಿವಾನಂದ ಇಟಗಿ ಮಾತನಾಡಿ, ಪ್ರತಿಭಟನಾ ಸ್ಥಳಕ್ಕೆ ಗದಗ ಜಿಲ್ಲಾ ಇಇಒ ಅಧಿಕಾರಿಗಳು ಆಗಮಿಸುವವರೆಗೆ ಧರಣಿ ಕೈಬಿಡುವುದಿಲ್ಲ. ರೈತರ ಬೇಡಿಕೆಗೆ ಸ್ಪಂದಿಸಿ ಭರವಸೆ ನೀಡಬೇಕಂದು ಪಟ್ಟು ಹಿದರು.

ಸ್ಥಳಕ್ಕೆ ಆಗಮಿಸಿದ ಅಧಿಕಾರಿ ರಾಜೇಶ ಕಲ್ಯಾಣಶೆಟ್ಟರ್ ಮಾತನಾಡಿ, ಸಧ್ಯಕ್ಕೆ ವಿದ್ಯುತ್ ಕೊರತೆಯಿದ್ದು, ಸರಿಪಡಿಸುವ ಕಾರ್ಯ ಮಾಡುತ್ತೇವೆ. ಸೋಮವಾರದಿಂದ ನಿರಂತವಾಗಿ 7 ತಾಸು ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುತ್ತೇವೆ ಎಂದು ಭರವಸೆ ನೀಡಿದರು.

ಈ ವೇಳೆ ಹೆಸ್ಕಾಂನ ಚನ್ನಪ್ಪ ಲಮಾಣಿ, ಈಶ್ವರ ಇದ್ದರು. ರೈತರಾದ ವಿಠಲ್ ಗಣಾಚಾರಿ, ಗರುಡಪ್ಪ ಜಂತ್ಲಿ, ಗಣೇಶ ಭರಮಕ್ಕನವರ, ಶರಣಪ್ಪ ಚೆನ್ನಳ್ಳಿ, ಅಂದಪ್ಪ ಹಂದ್ರಾಳ, ರಂಜಿತ್ ದಗ್ಗುಪಾಟಿ, ಶರಣಪ್ಪ ಕಂಬಳಿ ಸೇರಿದಂತೆ ನೂರಾರು ರೈತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

### ಹಬ್ಬ, ಮದುವೆ, ರಾಜಕೀಯ

## ಕಾರ್ಯಕ್ರಮಗಳಲ್ಲಿ ಪಟಾಕಿ ನಿಷೇಧ : ಸಿಎಂ

■ **ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಗಣೇಶ ಹಬ್ಬ, ಮದುವೆ ಸಮಾರಂಭ ಮತ್ತು ರಾಜಕೀಯ ಕಾರ್ಯಕ್ರಮಗಳಲ್ಲಿ ಸುರಕ್ಷತೆಯ ದೃಷ್ಟಿಯಿಂದ ಪಟಾಕಿ ಬಳಕೆಯನ್ನು ನಿಷೇಧಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಅತ್ತಿಬೆಲೆ ಪಟಾಕಿ ದುರಂತ ಹಿನ್ನೆಲೆಯಲ್ಲಿ ಮಂಗಳವಾರ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಮುಖ್ಯಸ್ಥರೊಂದಿಗೆ ಸಭೆ ನಡೆಸಿ ಚರ್ಚಿಸಿದ ಮುಖ್ಯಮಂತ್ರಿ, ದೀಪಾವಳಿ ಸಮೀಪವೇ ಬರುತ್ತಿದೆ. ಹೀಗಾಗಿ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗುತ್ತಿದ್ದೇವೆ. ದೀಪಾವಳಿ ಹಬ್ಬದ ವೇಳೆ ಹಸಿರು ಪಟಾಕಿ ಮಾತ್ರ ಸಿಡಿಸಲು ಅವಕಾಶ ಇದೆ ಎಂದು ತಿಳಿಸಿದರು.

ಪಟಾಕಿ ಸಿಡಿಸುವಾಗ ಸುಪ್ರೀಂಕೋರ್ಟ್ ಆದೇಶ ಪಾಲನೆ ಕಡ್ಡಾಯವಾಗಿದ್ದು, ನಿಯಮ ಉಲ್ಲಂಘಿಸಿದರೆ ಕಠಿಣ



ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ರಾಜ್ಯದೆಲ್ಲೆಡೆ ತಪಾಸಣೆ ನಡೆಸಿ, ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದ ಎಲ್ಲ ಗೋದಾಮುಗಳು ಹಾಗೂ ಮಳಿಗೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕು, ಅವುಗಳ ಪರವಾನಗಿ ರದ್ದುಪಡಿಸಬೇಕು ಎಂದು ಸೂಚಿಸಲಾಗಿದೆ ಎಂದರು.

ಅತ್ತಿಬೆಲೆ ಪಟಾಕಿ ದುರಂತದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅವರು ಇಂದು ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಮುಖ್ಯಸ್ಥರೊಂದಿಗೆ ಸಭೆ ನಡೆಸಿ ಚರ್ಚಿಸಿದರು.

## ನಿರಂತರ ಅಧ್ಯಯನ, ಜ್ಞಾನ ಸಂಪಾದನೆ ಮುಖ್ಯ

■ **ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ಎಲ್ಲಾ ರಂಗದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದು, ಕ್ರೀಡೆ, ಸಂಗೀತ, ಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಮಕ್ಕಳಲ್ಲಿ ನಿರಂತರ ಅಧ್ಯಯನ, ಜ್ಞಾನ ಸಂಪಾದನೆ ಅತಿ ಮುಖ್ಯವಾಗಿದೆ. ಈ ದಿಸೆಯಲ್ಲಿ ಕವನ, ಕಥೆಗಳು, ಮಹನೀಯರ ಕುರಿತಾದ ಪುಸ್ತಕ ಓದುವದನ್ನು ರೂಢಿಸಿಕೊಳ್ಳಬೇಕು ಎಂದು ನಾಡೋಜ ಡಾ. ಅನ್ನದಾನೀಶ್ವರ ಸ್ವಾಮೀಜಿ ಹಿತವಚನ ನೀಡಿದರು.

ಪಟ್ಟಣದ ಯಲ್ಲಮ್ಮ ದೇವಿ ಬಾಲಕಿಯರ ವಸತಿ ನಿಲಯದಲ್ಲಿ ಮಕ್ಕಳಿಗೆ ಮೂಲ ಸೌಲಭ್ಯಗಳ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಶ್ರೀಗಳು ಮಾತನಾಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ



ಪಿ.ವಾಯ್ ಶೆಟ್ಟೆಪ್ಪನವರ ಮಾತನಾಡಿ, ಸುಮಾರು 15 ವರ್ಷಗಳಿಂದ ನಮ್ಮ ಇಲಾಖೆಯ ಅಲ್ಪ ಅನುದಾನದಲ್ಲಿ ಈ ವಸತಿ ನಿಲಯವನ್ನು ನಡೆಸಿಕೊಂಡು ಬಂದಿದ್ದಾರೆ. ವಿದ್ಯಾರ್ಥಿಗಳು ಆಸಕ್ತಿಯಿಂದ ಕಲಿಕೆಯಲ್ಲಿ ಮುಂದೆ ಬರಬೇಕು ಎಂದು ಕಿವಿಮಾತು ಹೇಳಿದರು.

ನಿವೃತ್ತ ಪ್ರಾಚಾರ್ಯ ಎ.ವ್ಹಿ ಹಳ್ಳಿಕೇರಿ, ಡಾ.ತಿಪ್ಪೇಸ್ವಾಮಿ ಹೊಸಮನಿ, ಅಧ್ಯಕ್ಷತೆ ವಹಿಸಿದ್ದ ಶಿಶು ಅಭಿವೃದ್ಧಿ ಇಲಾಖೆಯ ಹಿರಿಯ ಮೇಲ್ವಿಚಾರಕಿ ಪದ್ಮಾವತಿ ಗೊವಿಂದರಡ್ಡಿ ಮಾತನಾಡಿದರು. ಸಂಸ್ಥೆಯ ಆಡಳಿತಾಧಿಕಾರಿ ರೇಣುಕಾ ಹೊಸಮನಿ ಸ್ವಾಗತಿಸಿದರು, ಮೇಲ್ವಿಚಾರಕಿ ಮಂಜುಳಾ ಕುರಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಕವಿತಾ ನಿರೂಪಿಸಿದರು, ಭುವನೇಶ್ವರಿ ವಂದಿಸಿದರು.

## ಹಿರೇಮಠ ಜಾತ್ರಾ ಮಹೋತ್ಸವ ಅದ್ಧೂರಿ ಆಚರಣೆಗೆ ನಿರ್ಧಾರ

■ **ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಪಟ್ಟಣದ ಹಿರೇಮಠದ 7ನೇ ಜಾತ್ರಾ ಮಹೋತ್ಸವವನ್ನು ಬರುವ ಡಿಸೆಂಬರ್ 1ರಿಂದ 11ರವರೆಗೆ ಅದ್ಧೂರಿಯಾಗಿ ಆಚರಿಸಲು ರವಿವಾರ ಸಂಜೆ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.

ನಿವೃತ್ತ ಶಿಕ್ಷಕ ಎಂ.ಎಸ್ ದಢೇಸೂರಮಠ ಮಾತನಾಡಿ, ಹಿರೇಮಠದ ಜಾತ್ರೆಯು ಸಾಹಿತ್ತಿಕ, ಸಾಂಸ್ಕೃತಿಕ ಅಭಿವೃದ್ಧಿಗೆ ಪೂರಕವಾಗಿದೆ. ಎಲ್ಲರೂ ಸೇರಿ ಜಾತ್ರೆಯನ್ನು ಅದ್ಧೂರಿಯಾಗಿ ಮಾಡೋಣ ಎಂದರು.

ನಿವೃತ್ತ ಪ್ರಾಚಾರ್ಯ ಡಿ.ಎ ಅರವಟಗಿಮಠ, ಶಿಕ್ಷಣ ಇಲಾಖೆಯ ಅಧಿಕಾರಿ ಕೆ.ಪಿ ಸಾಲಿಮಠ,

ನಿವೃತ್ತ ಮುಖ್ಯ ಶಿಕ್ಷಕ ಅರುಣ ಬಿ.ಕುಲಕರ್ಣಿ ಜಾತ್ರೆಯ ಆಚರಣೆಯ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಸಭೆಯನ್ನುದ್ದೇಶಿಸಿ ಡಾ. ಆರ್.ಕೆ ಗಚ್ಚಿನಮಠ, ನಿವೃತ್ತ



ಯೋಧ ಎಸ್.ಎಮ್ ಸಂಗನಾಳ, ಉಮೇಶಗೌಡ ಪಾಟೀಲ, ಡಾ. ಎಲ್.ಎಸ್ ಗೌರಿ, ಪ.ಪಂ ಸದಸ್ಯ ಕುಮಾರಸ್ವಾಮಿ ಕೋರಧಾನ್ಯಮಠ, ನಿಂಗಪ್ಪ ಕಣವಿ, ನಿವೃತ್ತ ಮುಖ್ಯ ಶಿಕ್ಷಕ ಕೆ.ಎಸ್ ಕಳಕಣ್ಣವರ ಮುಂತಾದವರು ಮಾತನಾಡಿದರು.

ಸಭೆಯ ಅಧ್ಯಕ್ಷತೆ ವಹಿಸಿ ಆಶೀರ್ವಚನ ನೀಡಿದ ಷ.ಬ್ರ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು, ಈ ಜಾತ್ರೆಯಿಂದ ನಮ್ಮ ಮನಸ್ಸಿಗೆ ಏನಾದರೂ ವಿಷಯ ತಿಳಿಯಬೇಕು, ಮನಃಪರಿವರ್ತನೆ ಆಗಬೇಕು. ಅಂದಾಗ ಜಾತ್ರೆಗಳಿಗೊಂದು ಅರ್ಥ ಬರುತ್ತದೆ. ಕಳೆದ ಆರು ವರ್ಷಗಳಿಂದ ಇದೇ ಹಿನ್ನೆಲೆಯನ್ನಿಟ್ಟುಕೊಂಡು ನಾವು ಜಾತ್ರಾಮಹೋತ್ಸವವನ್ನು ಆಚರಿಸಿಕೊಂಡು ಬರುತ್ತಿದ್ದೇವೆ. ಈ ಸಾರೆ ಮಹಾಸಾಧ್ವಿ ಶಿರೋಮಣಿ ಹೇಮರಡ್ಡಿ ಮಲ್ಲಮ್ಮನ ಪುರಾಣ ಪ್ರವಚನವನ್ನು ನಾವೆಲ್ಲರೂ ಸವಿಯೋಣ ಎಂದರು.

ಮುತ್ತಣ್ಣ ಪಲ್ಲೇದ ಹಿಂದಿನ ವರ್ಷದ ಜಾತ್ರಾಮಹೋತ್ಸವದ ಆಯವ್ಯಗಳ ಬಗ್ಗೆ ಸಭೆಗೆ ಮಾಹಿತಿ ನೀಡಿದರು. ಸಭೆಯಲ್ಲಿ ಶಿಕ್ಷಕ ಸುರೇಶ ಹಳ್ಳಿಕೇರಿ, ಶಿವಯೋಗಿ ಜಕ್ಕಲಿ, ಗುರುರಾಜ ಕುಲಕರ್ಣಿ, ಬಸವೇಶ ಜೋಳದ, ಎಸ್.ಕೆ ಪಾಟೀಲ, ಗುರುಪಾದಪ್ಪ ಬೆಲ್ಲದ, ನಿವೃತ್ತ ಶಿಕ್ಷಕ ಪಾಯಪ್ಪಗೌಡ್ರ, ಶರಣಪ್ಪ ಜುಟ್ಲ, ಸಿದ್ದಪ್ಪ ರಾಗಿ ಮುಂತಾದವರಿದ್ದರು. ಈಶ್ವರ ಬೆಟಗೇರಿ ಸ್ವಾಗತಿಸಿ, ನಿರೂಪಿಸಿದರು.

### ಅಖಂಡ ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಘಟಕ ಉದ್ಘಾಟಿಸಿದ ಸಿದ್ದನಗೌಡ ಪಾಟೀಲ

# ಪ್ರತಿ ಎಕರೆಗೆ 25 ಸಾವಿರ ರೂ ಬರ ಪರಿಹಾರ ಘೋಷಿಸಿ



■ **ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ರಾಜ್ಯದಲ್ಲಿ ಸಂಪೂರ್ಣ ಬರಗಾಲ ಆವರಿಸಿ, ರೈತರು ಸಂಕಷ್ಟದಲ್ಲಿದ್ದಾರೆ. ಸರಕಾರ ಎಲ್ಲ ತಾಲೂಕುಗಳನ್ನು ಬರಗಾಲ ಘೋಷಿಸಿ, ರೈತರ ಪ್ರತಿ ಎಕರೆಗೆ 25 ಸಾವಿರ ರೂ ಬರ ಪರಿಹಾರ ನೀಡಬೇಕೆಂದು ಅಖಂಡ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಅಧ್ಯಕ್ಷ ಸಿದ್ದನಗೌಡ ಪಾಟೀಲ ಆಗ್ರಹಿಸಿದರು.

ಅವರು ಲಕ್ಷ್ಮೇಶ್ವರ ಪಟ್ಟಣದಲ್ಲಿ ಸೋಮವಾರ ಅಖಂಡ ಕರ್ನಾಟಕ ರಾಜ್ಯ ರೈತ ಸಂಘದ ನೂತನ ಪದಾಧಿಕಾರಿಗಳ ಆಯ್ಕೆ ಹಾಗೂ ತಾಲೂಕು ಘಟಕವನ್ನು ಉದ್ಘಾಟಿಸಿ ಮಾತನಾಡಿದರು.

ಕಳೆದ ವರ್ಷ ಅತಿವೃಷ್ಟಿಯಿಂದ ನೊಂದಿದ್ದ ರೈತರಿಗೆ ಈ ಬಾರಿ ಬರಗಾಲ ದೊಡ್ಡ ಆಘಾತವನ್ನು ತಂದಿದೆ. ಹೀಗಿರುವಾಗ, ಸರಕಾರ ರೈತರ ನೆರವಿಗೆ ಆಗಮಿಸುವದು ಅಗತ್ಯ. ಬರ ಪರಿಹಾರ ನಿಧಿಯನ್ನು ಘೋಷಣೆ ಮಾಡುವದಾದರೆ ಪ್ರತಿ ಎಕರೆಗೆ 25 ಸಾವಿರ ರೂ ಘೋಷಣೆ ಮಾಡಲಿ. ತಾಲೂಕು ವ್ಯಾಪ್ತಿಯಲ್ಲಿ ಪ್ರಾರಂಭವಾಗಿರುವ ಈ ಸಂಘಟನೆ ಯಶಸ್ವಿಯಾಗಿ ರೈತರ ಸಮಸ್ಯೆಗೆ ಸ್ಪಂದಿಸುವಂತಾಗಲಿ ಎಂದರು.

ಹಾವೇರಿ ಜಿಲ್ಲಾಧ್ಯಕ್ಷ ಪ್ರಕಾಶ ಬಾರ್ಕಿ ಮಾತನಾಡಿ, ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರ ತಾಲೂಕುಗಳು ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿವೆ. ಈ ತಾಲೂಕುಗಳಿಗೆ ಅನ್ವಯವಾಗುವಂತೆ ಶಿಂಗಟಾಲೂರು ಏತ ನೀರಾವರಿಯ ಯೋಜನೆಯಿಂದ ನೀರಾವರಿ ಅನುಕೂಲ ಮಾಡಿಕೊಡಬೇಕು ಎಂದು ಹೇಳಿದರು.

ಅಖಂಡ ಕರ್ನಾಟಕ ರಾಜ್ಯ ರೈತ ಸಂಘದ ಲಕ್ಷ್ಮೇಶ್ವರ ತಾಲೂಕು ಅಧ್ಯಕ್ಷರಾಗಿ ಮಂಜಪ್ಪ ಸುಣಗಾರರನ್ನು ಆಯ್ಕೆ ಮಾಡಲಾಯಿತು. ಗದಗ ಜಿಲ್ಲಾ ಉಪಾಧ್ಯಕ್ಷ ಶಂಕ್ರಪ್ಪ ರಾಹುತ್, ಹಾಲೇಸಾಬ್ ನದಾಫ್, ಹನಮಂತಪ್ಪ ಬೆಳಗಟ್ಟಿ, ನಿಂಗನಗೌಡ ಪಾಟೀಲ್, ಸೈಯದ ಅಲಿ ನದಾಫ್, ಬಸವರಾಜ ದೇವಗಿರಿ, ಸಹದೇವಪ್ಪ ಹರಿಜನ, ಶಂಕಪ್ಪ ಮಾಗಡಿ, ಪರಶುರಾಮ ಬೂದಿಹಾಳ ಸೇರಿ ಹಲವರಿದ್ದರು.

ರೈತರ ಪರಿಸ್ಥಿತಿ ಹೇಗಾಗಿದೆಯೆಂದರೆ, ರೈತರ ಮಕ್ಕಳಿಗೆ ಕನ್ಯೆ ಕೊಡಲು ಯಾರೂ ಮುಂದೆ ಬರುತ್ತಿಲ್ಲ. ರೈತನಿಗೆ ಆದಾಯವಿಲ್ಲ ಎನ್ನುವ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಹೀಗಾಗಿ, ರೈತರ ಮಕ್ಕಳಿಗೆ ಕನ್ಯೆ ನೀಡಲು ಮುಂದಾಗುತ್ತಾರೋ ಅವರಿಗೆ 5 ಲಕ್ಷ ರೂ ನೀಡುವ ಯೋಜನೆಯನ್ನು ಸರಕಾರ ಜಾರಿ ಮಾಡಬೇಕಿದೆ ಎಂದು ಸಿದ್ದನಗೌಡ ಪಾಟೀಲ ಅಭಿಪ್ರಾಯಪಟ್ಟರು.

## ಜಕ್ಕಲಿಯ ಶ್ರೀಮಠದ ಪುರಾಣದಲ್ಲಿ ವೈಭವದ ತೊಟ್ಟಿಲೋತ್ಸವ

■ **ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಸಮೀಪದ ಜಕ್ಕಲಿ ಗ್ರಾಮದ ಶ್ರೀ ಅನ್ನದಾನೇಶ್ವರ ಶ್ರೀಮಠದಲ್ಲಿ ನಡೆಯುತ್ತಿರುವ ಪುರಾಣ ಪ್ರವಚನದಲ್ಲಿ ಸುಮಂಗಲಿಯರಿಂದ ವೈಭವದ ತೊಟ್ಟಿಲೋತ್ಸವ ಕಾರ್ಯಕ್ರಮ ಜರುಗಿತು.

21 ದಿನಗಳವರೆಗೆ ನಡೆದಿರುವ ಇಲಕಲ್ಲದ ಶ್ರೀ ವಿಜಯ ಮಹಾಂತೇಶ್ವರ ಶಿವಯೋಗಿಗಳವರ ಪುರಾಣ ಪ್ರವಚನದಲ್ಲಿ ಬರುವ ಸನ್ನಿವೇಶದಲ್ಲಿ ನಾಮಕರಣ ಕಾರ್ಯಕ್ರಮ ನಡೆಯಿತು. ಇದಕ್ಕೂ ಮೊದಲು ಪ್ರತಿ ವರ್ಷದ ಪದ್ಧತಿಯಂತೆ ಮೆಣಸಿಗಿಯವರ ಓಣಿಯ ಸಕಲ ಸದ್ಭಕ್ತರು ಗ್ರಾಮದ ಪ್ರಮುಖ ಬೀದಿಗಳಲ್ಲಿ ಭಜನೆ ಮಾಡುತ್ತಾ ಶ್ರೀಮಠಕ್ಕೆ ಬಂದು ತೊಟ್ಟಿಲನ್ನು ಸಮರ್ಪಿಸಿದರು.

ಬಳಿಕ ಗ್ರಾಮದ ಸದ್ಭಕ್ತರೆಲ್ಲರೂ ಸೇರಿ ತೊಟ್ಟಿಲಿಗೆ ಬಗೆ ಬಗೆಯ ಹೂವುಗಳಿಂದ ಅಲಂಕಾರ ಮಾಡಿ ಸಿಂಗರಿಸಿ, ತೊಟ್ಟಿಲೊಳಗೆ ಗೊಂಬೆಯನ್ನು ಇಟ್ಟು ಶ್ರದ್ಧಾ–ಭಕ್ತಿಯಿಂದ



ಪೂಜೆಯನ್ನು ಸಲ್ಲಿಸಿದರು. ಇದಾದ ಬಳಿಕ ಮಳಿಯಪ್ಪಯ್ಯ ಎಂಬ ನಾಮಕರಣ ಮಾಡಿ, ಜೋಗುಳ ಪದ, ಸೋಬಾನೆ ಪದಗಳನ್ನು ಸುಶ್ರಾವ್ಯವಾಗಿ ಹಾಡಿದರು.

ಶಾಂತಮ್ಮ ಹಿರೇಮಠ, ಅನಸಮ್ಮ ನಾಲ್ವಾಡದ, ಶರಣಮ್ಮ ಅಂಗಡಿ, ಲಕ್ಷ್ಮಮ್ಮ ನಾಲ್ವಾಡದ, ಸುಶೀಲಮ್ಮ ಮಸಲವಾಡ, ಪಾರಮ್ಮ ಸರಗಣಾಚಾರಿ, ವಿಜಯಲಕ್ಷ್ಮೀ ಕಡಗದ, ಶಾಂತಾ ವಾಲಿ, ಗುರುಮ್ಮ ಹಿರೇಮಠ, ಅನಸವ್ವ ಜಾಲಣ್ಣವರ, ಶೇಖಮ್ಮ ಹಂದ್ರಾಳ, ಗಿರಿಜಮ್ಮ ವಾಲಿ ಸೇರಿದಂತೆ ನೂರಾರು ಸುಮಂಗಲಿಯರು ಪಾಲ್ಗೊಂಡಿದ್ದರು. ಹಿರಿಯರಾದ ಶೇಖಣ್ಣವರ ಮೇಟಿ, ವೀರಯ್ಯ ಹಿರೇಮಠ, ಈಶ್ವರಪ್ಪ ಇಟಗಿ, ಸುಭಾಸ ಕಡಗದ, ಪ್ರಕಾಶಪ್ಪ ಹೊಸಮನಿ, ಶರಣಪ್ಪ ಕುರಡಗಿ, ಉಮೇಶ್ ಕೊಪ್ಪದ, ಮಲ್ಲಿಕಾರ್ಜುನ ಕುರಡಗಿ, ಸಣ್ಣ ದ್ಯಾಮಣ್ಣ ಮಡಿವಾಳರ, ಶಿವಪುತ್ರಯ್ಯ ಸರಗಣಾಚಾರಿ, ವೀರಪ್ಪ ತಳವಾರ, ಅಂದಾನಗೌಡ್ರ ಪಾಟೀಲ, ಹರ್ಷವರ್ಧನ್ ದೊಡ್ಡಮೇಟಿ ಸೇರಿದಂತೆ ಇನ್ನಿತರರು ಇದ್ದರು.

ಪ್ರಕಾಶ ವಾಲಿ ಕಾರ್ಯಕ್ರಮ ನಿರೂಪಿಸಿದರು. ಮಂಜುನಾಥ ಶಾಸ್ತ್ರೀ ಪುರಾಣ ಪ್ರವಚನಗೈದರು. ಬಸಯ್ಯ ಹಿರೇಮಠ ಹಾರ್ಮೋನಿಯಂಗೆ ಶಾಂತವೀರಯ್ಯ ಹಿರೇಮಠ ತಬಲಾ ಸಾಥ್ ನೀಡಿದರು.

# ಬೆಟಗೇರಿ ಮಹಾತ್ಮ ಗಾಂಧಿ ಹಾಕಿ ಕ್ರೀಡಾಂಗಣದಲ್ಲಿ ದಸರಾ ಶಿಬಿರ

■ವಿಜಯಸಾಕ್ಷಿ ಸುದ್ದಿ, ಗದಗ

ಬೆಟಗೇರಿಯಲ್ಲಿರುವ ಮಹಾತ್ಮ ಗಾಂಧಿ ಹಾಕಿ ಕ್ರೀಡಾಂಗಣವು ಈಗಾಗಲೇ ಉದ್ಘಾಟನೆಗೊಂಡು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗಿರುತ್ತದೆ. ಸದರಿ ಹಾಕಿ ಕ್ರೀಡಾಂಗಣದಲ್ಲಿ ನುರಿತ ತರಬೇತುದಾರರದಿಂದ ಸರ್ಕಾರದ ಸುತ್ತೋಲೆಯಂತೆ ಶುಲ್ಕ ಸಂಗ್ರಹಿಸಿ ಹಾಕಿ ತರಬೇತಿಯನ್ನು ನೀಡಲಾಗುತ್ತಿದ್ದು, ವಿಶೇಷವಾಗಿ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಖಾಸಗಿ ಸಂಘಗಳ ಸಹಭಾಗಿತ್ವದಲ್ಲಿ ಅಕ್ಟೋಬರ್ 11 ರಿಂದ 25 ರವರೆಗೆ ದಸರಾ ಶಿಬಿರವನ್ನು ಏರ್ಪಡಿಸಲಾಗಿದೆ.

ಆಸಕ್ತ ಕ್ರೀಡಾಪಟುಗಳು ಹಾಗೂ ಸಾರ್ವಜನಿಕರು ದಸರಾ ತರಬೇತಿ ಶಿಬಿರದಲ್ಲಿ ತರಬೇತಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಾಕಿ ತರಬೇತುದಾರರಾದ ಮಂಜುನಾಥ ಬಾಗಡೆ, ಮೊಬೈಲ್ ನಂ. 9036533909 ಹಾಗೂ ಹಾಕಿ ತರಬೇತುದಾರರಾದ ಪ್ರವೀಣ ಕೊರಸ, ಮೊಬೈಲ್ ನಂ. 9620545471 ಗೆ ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಭಿವೃದ್ಧಿ ನಿಗಮದಿಂದ ವಿವಿಧ ಸೌಲಭ್ಯಗಳಿಗಾಗಿ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮದಿಂದ 2023-24ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ನೇರಸಾಲ ಯೋಜನೆ, ಗಂಗಾ ಕಲ್ಯಾಣ ಯೋಜನೆ. ಈ ಯೋಜನೆಯಲ್ಲಿ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು. ಇತರೇ ಜಿಲ್ಲೆಗಳಲ್ಲಿ ಕನಿಷ್ಠ 2 ಎಕರೆ ಹೊಂದಿರಬೇಕು.) ಅರಿವು-ಶೈಕ್ಷಣಿಕ ನೇರಸಾಲ ಯೋಜನೆ (ಹೊಸತು) ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ. ಸ್ವಾವಲಂಬಿ ಸಾರಥಿ ಯೋಜನೆ. ಸ್ವಯಂ ಉದ್ಯೋಗ ಸಾಲ ಯೋಜನೆ (ವಾಣಿಜ್ಯ ಬ್ಯಾಂಕ್‌ಗಳ ಸಹಯೋಗದೊಂದಿಗೆ) , ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಸೇವಾ ಸಿಂಧು ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ನವೆಂಬರ್ 3 ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್ www.kaad.karnataka.gov.in ರಲ್ಲಿ ಅಥವಾ ನಿಗಮದ ಕೇಂದ್ರ ಕಚೇರಿಯ ದೂರವಾಣಿ / ಸಹಾಯವಾಣಿ ಸಂಖ್ಯೆ :080-22374832 ಮತ್ತು 8050770004 ಅಥವಾ 8050770005 ಯಿಂದ ಪಡೆಯಬಹುದಾಗಿದೆ.

# ಸಾರ್ವಜನಿಕರ ಗಮನಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿ ಈಜುಕೊಳ, ನಂದೀಶ್ವರ ನಗರ ಈಜುಕೊಳ ಹಾಗೂ ರಾಜೀವ ಗಾಂಧಿ ನಗರದಲ್ಲಿರುವ ಸ್ವಾಮಿ ವಿವೇಕಾನಂದ ಈಜುಕೊಳಗಳು ಸಾರ್ವಜನಿಕ ಸೇವೆ ಪ್ರಾರಂಭಿಸಿದ್ದು, ಸದರಿ ಈಜುಕೊಳದಲ್ಲಿ ನುರಿತ ತರಬೇತುದಾರರಿಂದ ಈಜು ತರಬೇತಿಯನ್ನು ನೀಡಲಾಗುತ್ತಿದೆ. ಸದರಿ ಈಜುಕೊಳಗಳಲ್ಲಿ ಅಕ್ಟೋಬರ್ 11 ರಿಂದ 25 ರವರೆಗೆ ದಸರಾ ಶಿಬಿರವನ್ನು ಏರ್ಪಡಿಸಲಾಗಿದೆ.

ಆಸಕ್ತ ಕ್ರೀಡಾಪಟುಗಳು ಹಾಗೂ ಸಾರ್ವಜನಿಕರು ಮೇಲ್ಕಾಣಿಸಿದ ಸಮಯದಲ್ಲಿ ದಸರಾ ತರಬೇತಿ ಶಿಬಿರದಲ್ಲಿ ತರಬೇತಿಯನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ನಂದೀಶ್ವರ ನಗರ ಈಜುಕೊಳ ತರಬೇತುದಾರರಾದ ಶಿವಾನಂದ ಎಂ. ಮೊಬೈಲ್ ನಂ. 7338689385 ಹಾಗೂ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣ ಈಜುಕೊಳದ ತರಬೇತುದಾರರಾದ ಗೋವಿಂದರೆಡ್ಡಿ ಆರ್.ಕೋಣಿ ಮೊಬೈಲ್ ಸಂಖ್ಯೆ 8123408090, ರಾಜೀವ ಗಾಂಧಿ ನಗರದ ವಿವೇಕಾನಂದ ಈಜುಕೊಳದ ತರಬೇತುದಾರರಾದ ಮುಕ್ತುಂಸಾಬ ನರಗುಂದ ಮೊಬೈಲ್ ಸಂಖ್ಯೆ 9036314370 ಗೆ ಸಂಪರ್ಕಿಸಬಹುದಾಗಿದೆ.

# ಅರ್ಜಿಗಳನ್ನು ನಾನೇ ಖುದ್ದಾಗಿ ಪರಿಶೀಲಿಸುತ್ತೇನೆ

▸▸ಮೊದಲನೇ ಪುಟದಿಂದ

1700 ಹೆಕ್ಟೇರ್ ಪ್ರದೇಶದ ರೈತರಿಗೆ ಅನುಕೂಲವಾಗಲಿದ್ದು, ಹಲವು ವರ್ಷಗಳಿಂದ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯದಿಂದ ಕಾಲುವೆ ದುರಸ್ತಿಯಾಗದೇ ಉಳಿದಿದೆ.

ಆದ್ದರಿಂದ ಕೆರೆಯ ನೀರು ರೈತರಿಗೆ ಸಿಗುವುದಕ್ಕೆ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಮಾಚೇನಹಳ್ಳಿಯ ಶಂಕರ ಮರಾಠೆ ಡಿಸಿ ಅವರ ಗಮನಕ್ಕೆ ತಂದರು.

ತಹಸೀಲ್ದಾರ ಅನಿಲ ಬಡಿಗೇರ, ತಾ.ಪಂ ಆಡಳಿತಾಧಿಕಾರಿ ಎ.ಎ ಕಂಬಾಳಿಮಠ, ಇಓ ಡಾ. ಎನ್.ಎಚ್ ಓಲೇಕಾರ ಹಾಗೂ ತಾಲೂಕಿನ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಿಎಸ್‌ಐ ಆಸ್ಪತ್ರೆಯಲ್ಲಿ 'ವಿಶ್ವ ಮಾನಸಿಕ ಆರೋಗ್ಯ ದಿನ' ಆಚರಣೆ

# ಖಿನ್ನತೆಗೊಳಗಾದವರಿಗೆ ಬೇಕು ಆಪ್ತಸಮಾಲೋಚನೆ

■ವಿಜಯಸಾಕ್ಷಿ ಸುದ್ದಿ, ಗದಗ

ಕೌಟುಂಬಿಕ ಸಮಸ್ಯೆ, ವೈಯಕ್ತಿಕ ಚಿಂತೆಗಳಿಂದಾಗಿ ವ್ಯಕ್ತಿ ಮಾನಸಿಕವಾಗಿ ನೊಂದುಕೊಂಡು ಖಿನ್ನತೆಗೆ ಒಳಗಾಗಿದ್ದರೆ ಅವರಿಗೆ ಸ್ನೇಹ ಮತ್ತು ಪ್ರೀತಿಯೊಂದಿಗೆ ಆಪ್ತವಾಗಿ ಸ್ಪಂದಿಸಿದಲ್ಲಿ, ತಜ್ಞ ವೈದ್ಯರ ಸಲಹೆ, ಚಿಕಿತ್ಸೆಯಿಂದ ಮಾನಸಿಕ ರೋಗಿ ಆಗುವದನ್ನು ತಡೆಗಟ್ಟಲು ಸಾಧ್ಯವಿದೆ ಎಂದು ಡಿಎಚ್‌ಓ ಡಾ. ಎಸ್.ಎಸ್ ನೀಲಗುಂದ ಅಭಿಪ್ರಾಯಪಟ್ಟರು.

ಅವರು ಮಂಗಳವಾರ ಬೆಟಗೇರಿಯ ಸಿಎಸ್‌ಐ (ಜರ್ಮನ್) ಹಾಸ್ಪಿಟಲ್‌ನ ಪ್ರೇಮನಿಲಯ ಸಭಾಂಗಣದಲ್ಲಿ ಸಿಎಸ್‌ಐ ಆಸ್ಪತ್ರೆಯಿಂದ ಏರ್ಪಡಿಸಿದ್ದ 'ವಿಶ್ವ ಮಾನಸಿಕ ಆರೋಗ್ಯ ದಿನ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.




ಮಾನಸಿಕವಾಗಿ ನೊಂದುಕೊಂಡಿರುವ ವ್ಯಕ್ತಿಗೆ ಸಮಾಧಾನ, ಆಪ್ತಸಮಾಲೋಚನೆ, ಮನಃಪರಿವರ್ತನೆ, ತಿಳುವಳಿಕೆಯ ಶಿಕ್ಷಣ ನೀಡುವ ಮೂಲಕ ಅವರಲ್ಲಿ ಜಾಗೃತಿ, ಆತ್ಮವಿಶ್ವಾಸವನ್ನು ಮೂಡಿಸಬೇಕು. ಕುಟುಂಬ, ಬಂಧು-ಬಳಗ, ಸಮಾಜ, ಪ್ರಜ್ಞಾವಂತರು ಎಲ್ಲರೂ ಸೇರಿ ಮಾನಸಿಕತನ ಇಳಿಮುಖ ಮಾಡಬೇಕಿದೆ. 'ಮಾನಸಿಕ ಆರೋಗ್ಯವು ಸಾರ್ವತ್ರಿಕ ಮಾನ ಹಕ್ಕು' ಎಂಬ ವಿಶ್ವ ಆರೋಗ್ಯ ಸಂಸ್ಥೆಯ ಈ ವರ್ಷದ ಧ್ಯೇಯವನ್ನು ಸಾಕಾರಗೊಳಿಸೋಣ ಎಂದರು.

ಮುಖ್ಯ ಅತಿಥಿ, ಚಿಕ್ಕಮಕ್ಕಳ ತಜ್ಞ ಡಾ.ಸಂಜೀವ ಜೋಶಿ ಮಾತನಾಡಿ, ಕೋವಿಡ್ ಅವಧಿಯ 3 ವರ್ಷ ಕಾಲ ಚಿಕ್ಕಮಕ್ಕಳ ಹಾಗೂ ಮಧ್ಯ ವಯಸ್ಕರರ ಮನಃಸ್ಥಿತಿಯಲ್ಲಿ ಕೊಂಚ ಬದಲಾವಣೆ ಕಂಡು ಬರುತ್ತದೆ. ಅದರಲ್ಲೂ ವಿಶೇಷವಾಗಿ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಆನ್‌ಲೈನ್ ಪಾಠಗಳನ್ನು ಮೊಬೈಲ್ ಮುಖಾಂತರ ಮಾಡಿದ್ದರ ಪರಿಣಾಮವಾಗಿ ಮಕ್ಕಳು ಇಂದು ಮೊಬೈಲ್ ದಾಸರಾಗಿದ್ದಾರೆ.

ಮಕ್ಕಳು ಹಾಗೂ ಯುವಕರು ಮೊಬೈಲ್‌ನ್ನು ಹೆಚ್ಚಾಗಿ ಬಳಕೆ ಮಾಡುವುದರಿಂದ ಅವರಲ್ಲಿ ವಿಚಾರ, ತರ್ಕ, ಸಂವಹನ ಮಾಡುವ ಪ್ರವೃತ್ತಿಯೇ ಕುಗ್ಗಿದೆ. ಜಾಣ ವಿದ್ಯಾರ್ಥಿಗಳಲ್ಲಿ ವಿಚಾರ ಶಕ್ತಿ ಹಾಗೂ ಬುದ್ಧಿವಂತಿಕೆ ಇಳಿಮುಖವಾಗಿರುವದು ಆತಂಕಕಾರಿ ಸಂಗತಿ ಅಷ್ಟೇ ಅಲ್ಲ, ಕ್ರಮೇಣ ಇದು ಮಾನಸಿಕ ಖಿನ್ನತೆಗೆ ರಾಜಮಾರ್ಗ ಆಗುತ್ತಿರುವದು ಕುಟುಂಬದಲ್ಲಿ, ಸಮಾಜದಲ್ಲಿ ಆತಂಕ ಸೃಷ್ಟಿಸಿದೆ. ಪಾಲಕ-ಪೋಷಕರು ಈಗಲೇ ಎಚ್ಚೆತ್ತುಕೊಂಡು ಚಿಕ್ಕಮಕ್ಕಳನ್ನು, ಯುವಕರ ಸ್ಮಾರ್ಟ್‌ಫೋನ್ ಬಳಕೆಗೆ ಕಡಿವಾಣ ಹಾಕದಿದ್ದಲ್ಲಿ ಮಾನಸಿಕ ರೋಗಿಗಳ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ ಎಂಬ ಕಳವಳ ವ್ಯಕ್ತಪಡಿಸಿದರು.

ನಮ್ಮ ಹಳೆಯ ಸಂಪ್ರದಾಯಗಳು, ಮಾನವೀಯ ಸಂಬಂಧಗಳು, ಸ್ನೇಹಗಳು ಗಟ್ಟಿಗೊಳ್ಳಬೇಕು. ಒಬ್ಬರಿಗೊಬ್ಬರು ಸ್ಪಂದಿಸುವ, ವಿಚಾರ ವಿನಿಮಯ ಮಾಡಿಕೊಳ್ಳುವ ಮೂಲಕ ನಮ್ಮ ಮನಸ್ಸಿನ ಭಾವನೆಗಳನ್ನು ಹಂಚಿಕೊಂಡು ಒತ್ತಡವನ್ನು ನಿಗ್ರಹಿಸಿ ಮನೋಲ್ಲಾಸ, ಮನೋವಿಕಾಸಕ್ಕೆ ಮುಂದಾಗಬೇಕಿದೆ ಎಂದರು.

ಸಿಎಸ್‌ಐ ಆಸ್ಪತ್ರೆಯ ಮುಖ್ಯಸ್ಥ ಡಾ.ಅಜೇಯರಾಜ್ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸುನೀಲ ನಡಕಟ್ಟಿನ ನಿರೂಪಿಸಿ ವಂದಿಸಿದರು. ವೇದಿಕೆಯ ಮೇಲೆ ಡಾ.ಸವಿತಾ ರಾಜು ಉಪಸ್ಥಿತರಿದ್ದರು. ಸಮಾರಂಭದಲ್ಲಿ ವೈದ್ಯರು, ನರ್ಸಿಂಗ್ ಸಿಬ್ಬಂದಿ ವರ್ಗ, ಸಾರ್ವಜನಿಕರು ಪಾಲ್ಗೊಂಡಿದ್ದರು.

> ಆಧುನಿಕತೆಯ ಇಂದಿನ ದಿನಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಹೆಚ್ಚಿದಂತೆ ಸೋಮಾರಿ ಆಗುತ್ತಿದ್ದೇವೆ. ಚಲನವಲನ, ಕ್ರಿಯಾಶೀಲತೆ ಇಲ್ಲದೆ, ಮೈಮುರಿದು ಕೆಲಸ ಮಾಡದೇ ಮೊಬೈಲ್ ತಿಕ್ಕುತ್ತ ಕಾಲಹರಣ ಮಾಡುತ್ತಿದ್ದೇವೆ. ನಮ್ಮ ಸುತ್ತ ಏನು ನಡೆದಿದೆ, ಈ ಮೊಬೈಲ್‌ನಿಂದಾಗಿ ನಮ್ಮ ಪಕ್ಕದಲ್ಲಿ ಯಾರಿದ್ದಾರೆ ಎಂಬ ಪರಿವೇ ನಮಗಿಲ್ಲದಾಗಿದೆ.
>
> **– ಡಾ.ಸಾಮ್ಯುವೆಲ್ ವೆಸ್ಲಿ.**
> ಮನೋವೈದ್ಯರು, ಸಿಎಸ್‌ಐ ಆಸ್ಪತ್ರೆ.

# ನಮ್ಮ ಸಂವಿಧಾನ ಶ್ರೇಷ್ಠ, ಶಕ್ತಿಯುತ

▸▸ಮೊದಲನೇ ಪುಟದಿಂದ



ಹಾಗೂ ಶಾಸಕಾಂಗವು ಸಂವಿಧಾನದ ಅಡಿಯಲ್ಲಿಯೇ ಕಾರ್ಯನಿರ್ವಹಿಸುತ್ತವೆ. ನಮ್ಮ ದೇಶದ ಪವಿತ್ರ ಸಂವಿಧಾನವನ್ನು ಅರಿತು ಸದೃಢ ರಾಷ್ಟ್ರ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಮುಂದಾಗಬೇಕು. ಸಂವಿಧಾನದಲ್ಲಿನ ತಿದ್ದುಪಡಿಯ ಮೂಲಕ ಮಹಿಳೆಯರು ಅಧಿಕಾರದ ಚುಕ್ಕಾಣಿಯನ್ನು ಹಿಡಿದಿದ್ದು, ಸಂವಿಧಾನ ನೀಡಿದ ಹಕ್ಕು ಹಾಗೂ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವದರ ಮೂಲಕ ಸುಂದರ ಸಮಾಜ ನಿರ್ಮಾಣಕ್ಕೆ ಮುಂದಾಗುವಂತೆ ಕರೆ ನೀಡಿದರು.

ಕೇರಳದ ಲೋಕಲ್ ಸೆಲ್ಫ್ ಗವರ್ನಮೆಂಟ್ ಜಂಟಿ ನಿರ್ದೇಶಕರಾದ ಸುದೇಶನ ಅವರು ಸಂವಿಧಾನದ ಪೀಠಿಕೆ ಹಾಗೂ ಕಾರ್ಯಗಳು ಕುರಿತು ವಿಶೇಷ ಉಪನ್ಯಾಸ ನೀಡಿದರು. ಹುಲಕೋಟಿ ಸಹಕಾರ ರೇಡಿಯೋ ನಿರ್ದೇಶಕ ಜೆ.ಕೆ ಜಮಾದಾರ ಅವರು ಸುದೇಶನ ಅವರ ಉಪನ್ಯಾಸವನ್ನು ಕನ್ನಡಕ್ಕೆ ಭಾಷಾಂತರಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿ.ಪಂ ಉಪಕಾರ್ಯದರ್ಶಿ ಸಿ.ಆರ್ ಮುಂಡರಗಿ, ಮಾಜಿ ಶಾಸಕ ಡಿ.ಆರ್ ಪಾಟೀಲ, ಜಿ.ಪಂ ಮಾಜಿ ಅಧ್ಯಕ್ಷ ವಾಸಣ್ಣ ಕುರಡಗಿ, ಚುನಾಯಿತ ಜನಪ್ರತಿನಿಧಿಗಳು, ಮಹಿಳಾ ಜನಪ್ರತಿನಿಧಿಗಳು, ಗಣ್ಯರು, ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

# ಮತ್ತೊಂದು ಸುತ್ತಿನ ರಾಜಕಾರಣದ ಆರಂಭ

▸▸ಮೊದಲನೇ ಪುಟದಿಂದ

ಕಾಂಗ್ರೆಸ್ ಪಕ್ಷವನ್ನು ಸೇರ್ಪಡೆಯಾಗುವ ಮೂಲಕ ಹೊಸ ಚರ್ಚೆಗೆ ಕಾರಣವಾಗಿದ್ದರು. ಚುನಾವಣೆ ಬಿರುಸು ಪಡೆಯುವ ವೇಳೆಯಲ್ಲಿ ಪುರಸಭೆ ನಾಮ ನಿರ್ದೇಶನ ಸ್ಥಾನಕ್ಕೆ ರಾಜೀನಾಮೆ ನೀಡುವ ಮೂಲಕ ಮುಖಂಡ ಬಸವರಾಜ ಹೂಗಾರ ಅವರು ಆಡಳಿತ ಹಾಗೂ ಜನಸಾಮಾನ್ಯರ ಗಮನವನ್ನು ಸೆಳೆದು ಜಿ.ಎಸ್ ಪಾಟೀಲ ಬಣವನ್ನು ಬಲ ಪಡಿಸಲು ಮುಂದಾಗಿದ್ದರು. ರಾಜಕೀಯದಲ್ಲಿ ಅಧಿಕಾರವಿಲ್ಲದಿದ್ದಾಗ ಎಲ್ಲರೂ ಸ್ನೇಹಿತರು. ಆದರೆ ಅವರಲ್ಲಿಯೇ ಒಬ್ಬರಿಗೆ ಅಧಿಕಾರ ಸಿಕ್ಕರೆ ಇನ್ನುಳಿದವರಲ್ಲಿ ಹೊಸ ಬಣ ಸೃಷ್ಟಿಯಾಗುವುದೇ ರಾಜಕೀಯದ ನಿಯಮ. ಸಹಜವಾಗಿ ಪುರಸಭೆ ನಾಮ ನಿರ್ದೇಶನ ರಾಜಕೀಯ ವಲಯದಲ್ಲಿ ಮತ್ತೊಂದು ಸುತ್ತಿನ ರಾಜಕಾರಣ ಆರಂಭವಾಗಲಿದ್ದು, ಪಕ್ಷದ ಮುಖಂಡರು ಅಸಮಾಧಾನವನ್ನು ಶಮನಗೊಳಿಸಲು ಯಾವ ಹೊಸ ತಂತ್ರಗಳನ್ನು ಹೆಣೆಯಲಿದ್ದಾರೆ ಎಂಬುದು ಕಾದು ನೋಡಬೇಕಿದೆ.

# ಇಂದು ಅಂಚೆ ಜನ ಸಂಪರ್ಕ ಅಭಿಯಾನ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಚೆನ್ನಮ್ಮನ ವನ ಕಲ್ಯಾಣ ಮಂಟಪದಲ್ಲಿ ಅ.11 ರ ಬುಧವಾರ ಬೆಳಿಗ್ಗೆ 10 ಕ್ಕೆ ಅಂಚೆ ಜನಸಂಪರ್ಕ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಶಾಸಕ ಡಾ.ಚಂದ್ರು ಲಮಾಣಿ ಉದ್ಘಾಟಿಸುವರು.

ಅಂಚೆ ಅಧಿಕಾರಿಗಳು, ತಾಲೂಕು ಅಧಿಕಾರಿಗಳು, ಜನಪ್ರತಿನಿಧಿಗಳು ಗಣ್ಯರು, ಆಗಮಿಸುವರು.

ಸಾರ್ವಜನಿಕರು ಪಾಲ್ಗೊಳ್ಳಲು ಲಕ್ಷ್ಮೇಶ್ವರ ಅಂಚೆ ಪಾಲಕ ದೊಡ್ಡಪ್ಪ ಇಟಗಿ ತಿಳಿಸಿದ್ದಾರೆ.

# ಸಮರ್ಪಕ ವಿದ್ಯುತ್ ಪೂರೈಕೆಗೆ ಕಾರ್ಯಪ್ರವೃತ್ತರಾಗಿ

▸▸ಮೊದಲನೇ ಪುಟದಿಂದ

ಇದೇ ಸಂದರ್ಭದಲ್ಲಿ ರೋಣ ಕ್ಷೇತ್ರದಿಂದ ಆಗಮಿಸಿದ ರೈತರು ಸಭೆಯಲ್ಲಿ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡುವ ಮೂಲಕ ರೈತರ ಬೆಳೆಗೆ ನೀರು ಹಾಯಿಸಲು ಸಹಕರಿಸುವಂತೆ ಕೋರಿದರು.

ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ ಮಾತನಾಡಿ, ಅಸಮರ್ಪಕ ವಿದ್ಯುತ್ ಪೂರೈಕೆಯಿಂದ ರೈತರು ಪದೇಪದೇ ಪ್ರತಿಭಟನೆ ಮಾಡಿ, ವಿದ್ಯುತ್ ಸರಬರಾಜು ಕೇಂದ್ರಗಳಿಗೆ ತೆರಳಿ ತಮ್ಮ ಅಸಮಾಧಾನವನ್ನು ಹೊರಹಾಕುತ್ತಿದ್ದಾರೆ. ಅಧಿಕಾರಿಗಳು ವಿದ್ಯುತ್ ಪೂರೈಕೆ ಕುರಿತು ನಿಯಮಿತವಾಗಿ ರೈತರಿಗೆ ಮಾಹಿತಿ ನೀಡುವಂತೆ ತಿಳಿಸಿದರು.

ಹೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ ರೋಶನ್ ಮಾತನಾಡಿ, ಗದಗ ಜಿಲ್ಲೆಗೆ ಪ್ರತಿದಿನ 160 ಮೆಗಾವ್ಯಾಟ್ ವಿದ್ಯುತ್ ಅಗತ್ಯವಿದೆ. ತಿಂಗಳಿಗೆ 50 ಮಿಲಿಯನ್ ಯುನಿಟ್ ಪೂರೈಕೆ ಮಾಡಬೇಕಿದೆ. ಸದ್ಯ ಮಳೆ ಅಭಾವದಿಂದಾಗಿ ವಿದ್ಯುತ್ ಉತ್ಪಾದನೆ ಕುಂಠಿತವಾಗಿದ್ದು, ಜಿಲ್ಲೆಗೆ ಪ್ರತಿದಿನ 60-70 ಮೆಗಾವ್ಯಾಟ್ ವಿದ್ಯುತ್ ಪೂರೈಸಲಾಗುತ್ತಿದೆ. ಅಲ್ಲದೇ ಆರ್‌ಟಿಪಿಎಸ್ ಮೂಲಕ ಮಾಡುವ ವಿದ್ಯುತ್ ಉತ್ಪಾದನೆಯ 8 ಘಟಕಗಳಲ್ಲಿ ಮೂರು ಘಟಕಗಳು ತಾಂತ್ರಿಕ ತೊಂದರೆಯಿಂದಾಗಿ ಸ್ಥಗಿತಗೊಂಡಿವೆ. ಇದರಿಂದಾಗಿ ಶೇ 50ಕ್ಕೂ ಅಧಿಕ ವಿದ್ಯುತ್ ಉತ್ಪಾದನೆ ಕಡಿಮೆಯಾಗಿದೆ ಎಂದರು.

ಗದಗ ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರ ರಾಜೇಶ ಕಲ್ಯಾಣಶೆಟ್ಟರ ಮಾತನಾಡಿ, ಗದಗ ಜಿಲ್ಲೆಯಲ್ಲಿನ ಪವನ ವಿದ್ಯುತ್ ಸ್ಥಾವರಗಳಿಂದ ಪ್ರತಿದಿನ 735 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗಬೇಕಿತ್ತು. ವಾತಾವರಣದಲ್ಲಿನ ಬದಲಾವಣೆಯಿಂದಾಗಿ ಗಾಳಿಯ ವೇಗ ಕುಂಠಿತಗೊಂಡಿರುವದರಿಂದ ಪ್ರತಿದಿನ 25 ಮೆಗಾವ್ಯಾಟ್ ಉತ್ಪಾದನೆ ಮಾತ್ರವೇ ಆಗುತ್ತಿದೆ. ಅನಾನುಕೂಲ ಪರಿಹರಿಸಲು ಅಧಿಕಾರಿ ವರ್ಗ ಶ್ರಮಿಸುತ್ತಿದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಡಿವಾಯ್‌ಎಸ್ಪಿ ಸಂಕದ, ಕೆಪಿಟಿಸಿಎಲ್ ಕಾರ್ಯಪಾಲಕ ಅಭಿಯಂತರ ರಮೇಶ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳು ಹಾಜರಿದ್ದರು.

> ಗದಗ ಜಿಲ್ಲೆಯ ಗ್ರಾಮೀಣ ಹಾಗೂ ನಗರದ ಪ್ರದೇಶದ ವಾಸಿಗಳಿಗೆ ಸಮರ್ಪಕ ವಿದ್ಯುತ್ ಪೂರೈಸಲು ಆಯಾ ವ್ಯಾಪ್ತಿಯ ಹೆಸ್ಕಾಂ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು. ರೈತರ ಬೆಳೆಗೆ ನೀರು ಪೂರೈಸಲು ನಿರಂತರ 7 ಗಂಟೆ ಕಾಲ ತ್ರಿಫೇಸ್ ವಿದ್ಯುತ್ ಪೂರೈಕೆ ಮಾಡಬೇಕು. ಈ ಪೂರೈಕೆಯಲ್ಲಿ ವ್ಯತಯ ಕಂಡುಬಂದಲ್ಲಿ ತಕ್ಷಣ ಆಯಾ ವ್ಯಾಪ್ತಿಯ ಅಧಿಕಾರಿಗಳು ವಿದ್ಯುತ್ ವ್ಯತ್ಯಯದ ಕುರಿತು ರೈತರಿಗೆ ಮಾಹಿತಿ ಒದಗಿಸಬೇಕು ಎಂದು ಸಚಿವ ಎಚ್.ಕೆ ಪಾಟೀಲ ತಿಳಿಸಿದರು.

## ಯಂತ್ರೋಪಕರಣಗಳ ಮೂಲಕ ಕಾಮಗಾರಿಗಳನ್ನು ಮಾಡಿಸಿ ಅವ್ಯವಹಾರ ನಡೆಸಿದ ಆರೋಪ

# ಹಣ ವಸೂಲಾತಿಗೆ ಶಿಫಾರಸ್ಸು ಮಾಡಿ ಆದೇಶ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಸೂರಣಗಿ ಗ್ರಾಮ ಪಂಚಾಯಿತಿಯಲ್ಲಿ ಮನರೇಗಾ ಯೋಜನೆಯ ಮಾರ್ಗಸೂಚಿಗಳನ್ನು ಕ್ರಮಬದ್ಧವಾಗಿ ಅನುಸರಿಸದೇ ಇರುವ ಕುರಿತು ಸಾರ್ವಜನಿಕರು ನೀಡಿದ ದೂರಿನನ್ವಯ ಪರಿಶೀಲನೆ ನಡೆಸಿದ ಒಂಬುಡ್ಸ್‌ಮನ್ಸ್ ತನಿಖಾಧಿಕಾರಿಗಳು ನರೇಗಾ ಕಾಮಗಾರಿ ನಿಷ್ಫಲವಾಗಿರುವುದು ಕಂಡು ಬಂದಿರುವ ಹಿನ್ನೆಲೆಯಲ್ಲಿ ತಾಂತ್ರಿಕ ಸಹಾಯಕ ಇಂಜಿನಿಯರ್ ಸುರೇಶ ಬಳ್ಳಾರಿ, ಪಂಚಾಯತ ಅಭಿವೃದ್ಧಿ ಅಧಿಕಾರಿ ಜಿ.ಎಂ ರೋಣದ ಹಾಗೂ ಗ್ರಾ.ಪಂ ಮಾಜಿ ಅಧ್ಯಕ್ಷ ಎಸ್.ಎಸ್ ದೊಡ್ಡಗಣ್ಣವರ ಅವರಿಂದ 8,95,002 ರೂಗಳನ್ನು ವಸೂಲಾತಿ ಮಾಡಲು ಶಿಫಾರಸ್ಸು ಮಾಡಿ ಆದೇಶಿಸಿದೆ.

ಘಟನೆ ಹಿನ್ನೆಲೆ: ಗ್ರಾ.ಪಂನಲ್ಲಿ ನರೇಗಾ ಕಾಮಗಾರಿಯಲ್ಲಿ ಯೋಜನೆಯ ಉದ್ದೇಶವನ್ನು ಗಾಳಿಗೆ ತೂರಿ ಮಾನವ ಸಂಪನ್ಮೂಲ ಹೊರತುಪಡಿಸಿ ಯಂತ್ರೋಪಕರಣಗಳನ್ನು ಬಳಸಿ ಕಾಮಗಾರಿಗಳನ್ನು ಮಾಡಿಸಿ ಅವ್ಯವಹಾರ ಮಾಡಿದ್ದಾರೆ ಎಂದು ಗ್ರಾ.ಪಂ ಸದಸ್ಯ ಪ್ರವೀಣ ಸೂರಣಗಿಯವರು 12 ಕಾಮಗಾರಿಗಳ ಪಟ್ಟಿಯನ್ನು ಪೂರಕ ದಾಖಲೆಗಳೊಂದಿಗೆ 27-7-2022ರಂದು ದೂರು ಸಲ್ಲಿಸಿದ್ದರು. ಈ ಅವ್ಯವಹಾರದಲ್ಲಿ ಗ್ರಾ.ಪಂ ಅಧ್ಯಕ್ಷೆಯ ಪತಿ ಮತ್ತು ಗುತ್ತಿಗೆದಾರರ ಹಸ್ತಕ್ಷೇಪವಾಗಿದೆ ಎಂದು ದೂರುದಾರರು ಆರೋಪಿಸಿದ್ದರು.

ದೂರುದಾರರು ನೀಡಿದ ದೂರಿನನ್ವಯ 6 ಕೆರೆಗಳ ಅಭಿವೃದ್ಧಿ ಯೋಜನೆಯಡಿ ಒಟ್ಟು 10 ಕಾಮಗಾರಿಗಳ ಹೂಳೆತ್ತುವ ಕಾರ್ಯ ಕೈಗೊಂಡಿದ್ದು, ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಕೆಲ ಕಾಮಗಾರಿಗಳ ದಾಖಲೆ ನಿರ್ವಹಣೆ, ಮನರೇಗಾ ಯೋಜನೆಯ ಮಾರ್ಗಸೂಚಿಗಳನ್ನು ಕ್ರಮಬದ್ಧವಾಗಿ ಅನುಸರಿಸದೇ ಇರುವದು ಕಂಡುಬಂದಿದೆ.

ಮನರೇಗಾ ಯೋಜನೆಯ ಮಸ್ಟರ್ ರೋಲ್ ಬಹುಮುಖ್ಯ ದಾಖಲಾತಿಯಾಗಿದ್ದು, ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕಾಮಗಾರಿಯ ಮಸ್ಟರ್ ರೋಲ್‌ಗಳನ್ನು ನಿರ್ವಹಿಸಿರುವಲ್ಲಿ ವಾಸ್ತವತೆ ಕಂಡುಬಂದಿರುವದಿಲ್ಲ.

ವಾಸ್ತವ ರೀತಿಯಲ್ಲಿ ಹಾಗೂ ಮುಂಗಡವಾಗಿ ಯೋಜನೆ ರೂಪಿಸಿಕೊಂಡು ಕಾಮಗಾರಿ ಅನುಷ್ಠಾನಗೊಳಿಸಲು ತಾಂತ್ರಿಕ ಸಹಾಯಕ ಇಂಜಿನಿಯರ್ ಪಂಚಾಯತ ಅಭಿವೃದ್ಧಿ ಅಧಿಕಾರಿ ಜಿ.ಎಂ ಹಾಗೂ ಬಿಎಫ್‌ಟಿ ತಿರುಕಪ್ಪ ಬಾಲೆಹೊಸೂರರವರಿಗೆ ಎಚ್ಚರಿಕೆ ನೀಡಲು ಶಿಫಾರಸ್ಸು ಮಾಡಿದೆ.

> ಸದರಿ ಹಣವನ್ನು ವಸೂಲಾತಿ ಮಾಡಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಖಾತೆಗೆ ಭರಣ ಮಾಡಲು ಸೂಚಿಸಿ 7 ದಿನಗಳೊಳಗಾಗಿ ವರದಿ ಸಲ್ಲಿಸಲು ಆದೇಶಿಸಿದೆ. 30 ದಿನಗಳಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಇದೇ ರೀತಿಯ ಪ್ರಕರಣ ತಾಲೂಕಿನ ಶಿಗ್ಲಿ ಗ್ರಾ.ಪಂನ ಅಧ್ಯಕ್ಷ/ಅಧಿಕಾರಿಗಳ ಮೇಲೂ 2 ವರ್ಷಗಳ ಹಿಂದೆಯೇ ವಸೂಲಿ ಆದೇಶವಾಗಿದ್ದು, ಪ್ರಕರಣ ನೆನೆಗುದಿಗೆ ಬಿದ್ದಿದೆ.

## ಪಟಾಕಿ ಮಾರಾಟ ದಾಖಲೆಗಳ ಪರಿಶೀಲನೆ, ಅನುಮತಿ ಇಲ್ಲದ ಪಟಾಕಿ ಅಂಗಡಿ ದಾಸ್ತಾನು ವಶಕ್ಕೆ

# ದಾಸ್ತಾನು, ಖರೀದಿ ಬಿಲ್‌ಗಳನ್ನು ಸರಿಯಾಗಿ ನಿರ್ವಹಿಸಿ



> ದಾಖಲೆಗಳನ್ನು ಸರಿಯಾಗಿ ನಿರ್ವಹಿಸಲು ಸೂಚಿಸಿದ್ದು, ದಾಖಲೆ ಇಲ್ಲದಿರುವವರ ವಿರುದ್ಧ ಕ್ರಮ ಕೈಗೊಂಡು, ಸೂಕ್ತ ದಾಖಲೆ ಒದಗಿಸಲು ಸೂಚಿಸಲಾಗಿದೆ. ಪಟಾಕಿ ಅಂಗಡಿಗಳಿಗೆ ಚಿಕ್ಕ ಮಕ್ಕಳು ಬರದಂತೆ ಎಚ್ಚರಿಕೆ ವಹಿಸಬೇಕು. ಅಗ್ನಿ ನಿರೋಧಕಗಳನ್ನು ಸರಿಯಾದ ರೀತಿಯಲ್ಲಿ ಹೊಂದಿರಬೇಕು. ದಾಸ್ತಾನು, ಖರೀದಿ ಬಿಲ್ಲುಗಳನ್ನು ಸರಿಯಾಗಿ ನಿರ್ವಹಿಸಬೇಕು ಎಂದು ಸೂಚಿಸಲಾಗಿದೆ.
>
> **– ಕೆ.ಆನಂದಶೀಲ್.**
> ತಹಸೀಲ್ದಾರರು.

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕಳೆದ ಕೆಲವು ದಿನಗಳ ಹಿಂದೆ ಬೆಂಗಳೂರು, ಹಾವೇರಿ ಇತ್ಯಾದಿ ಕಡೆಗಳಲ್ಲಿ ಪಟಾಕಿ ಗೋಡಾನ್, ಫ್ಯಾಕ್ಟರಿಗಳಿಗೆ ಬೆಂಕಿ ತಗುಲಿ ಸಾಕಷ್ಟು ಅನಾಹುತ ಸಂಭವಿಸಿರುವ ಹಿನ್ನೆಲೆಯಲ್ಲಿ, ಸರಕಾರ ಎಲ್ಲ ಪಟ್ಟಣ, ನಗರ ಪ್ರದೇಶಗಳಲ್ಲಿನ ಪಟಾಕಿ ಮಾರಾಟ ಮಳಿಗೆಗಳನ್ನು ಮತ್ತು ಗೋಡಾನುಗಳನ್ನು ಪರಿಶೀಲಿಸಿ, ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಆದೇಶಿಸಿದ ಹಿನ್ನೆಲೆಯಲ್ಲಿ ಪಟ್ಟಣದ ವಿವಿಧ ಪಟಾಕಿ ಮಾರಾಟಗಾರರ ಅಂಗಡಿಗಳಿಗೆ ತಹಸೀಲ್ದಾರ ಕೆ.ಆನಂದಶೀಲ್ ಅವರ ನೇತೃತ್ವದ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿತು. ಅಂಗಡಿಗಳ ಅನುಮತಿ ಪತ್ರ, ದಾಸ್ತಾನು ರಿಜಿಸ್ಟರ್, ಅಗ್ನಿ ಶಾಮಕ ವ್ಯವಸ್ಥೆ, ದಾಸ್ತಾನು ಮಳಿಗೆಗಳಲ್ಲಿ ಕೈಗೊಂಡ ಮುನ್ನೆಚ್ಚರಿಕೆ ಕ್ರಮಗಳು ಇತ್ಯಾದಿಗಳ ಪರಿಶೀಲನೆ ನಡೆಸಿದರು. ಅಲ್ಲದೆ ಸಮೀಪದ ಶಿಗ್ಲಿ ಗ್ರಾಮದಲ್ಲಿಯ ಪಟಾಕಿ ಅಂಗಡಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ತಹಸೀಲ್ದಾರರು, ಗ್ರಾಮದ ಒಂದು ಅಂಗಡಿಯವರು ಅನುಮತಿ ಪತ್ರ ಹಾಜರುಪಡಿಸದಿರುವದು ಮತ್ತು ಸ್ಟಾಕ್ ರಿಜಿಸ್ಟರ್ ಹೊಂದಿರದೆ ಇರುವ ಹಿನ್ನೆಲೆಯಲ್ಲಿ ಪಿಎಸ್‌ಐ ಯುಸುಫ್ ಜಮೂಲ ಅವರ ಸಮ್ಮುಖದಲ್ಲಿ ದಾಸ್ತಾನು ಇರುವ ಪಟಾಕಿಗಳನ್ನು ಸೀಜ್ ಮಾಡಿ, ದಾಖಲೆಗಳನ್ನು ಕಚೇರಿಗೆ ಹಾಜರಪಡಿಸಲು ಸೂಚಿಸಿದರು.

ಪಟ್ಟಣದಲ್ಲಿನ ಅಂಗಡಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ತಹಸೀಲ್ದಾರ ಕೆ.ಆನಂದಶೀಲ್ ಅವರು ಪತ್ರಿಕೆಯೊಂದಿಗೆ ಮಾತನಾಡಿ, ಪ್ರತಿವರ್ಷ ಎಲ್ಲ ಪಟಾಕಿ ಅಂಗಡಿಗಳ ದಾಸ್ತಾನು, ದಾಖಲೆಗಳು ಸೇರಿದಂತೆ ಮಾಹಿತಿ ಪರಿಶೀಲನೆ ಮಾಡುತ್ತಿದ್ದು, ಇದೀಗ ಸರಕಾರದ ಆದೇಶದಂತೆ ಸೂಕ್ತ ಮುನ್ನೆಚ್ಚರಿಕೆ ಕ್ರಮವಾಗಿ ಪರಿಶೀಲನೆ ನಡೆಸಲಾಗಿದ್ದು, ಮಾರಾಟದ ಸಂದರ್ಭದಲ್ಲಿ ವ್ಯಾಪಾರಸ್ಥರು ವಹಿಸಬೇಕಾದ ಕ್ರಮಗಳನ್ನು ಸಹ ತಿಳಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಪಿಎಸ್‌ಐ ಯುಸುಫ್ ಜಮೂಲಾ, ಕಂದಾಯ ನಿರೀಕ್ಷಕ ಬಿ.ಎಂ ಕಾತ್ರಾಳ, ಗ್ರಾಮ ಲೆಕ್ಕಾಧಿಕಾರಿ ಕುಲಕರ್ಣಿ ಮುಂತಾದವರಿದ್ದರು.

## ಮಕ್ಕಳಲ್ಲಿ ಪರಿಸರದ ಅರಿವು ಮೂಡಿಸಿ



■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಶಾಲೆಗಳಲ್ಲಿ ಮುಕ್ಕಳಿಗೆ ಪರಿಸರಾತ್ಮಕ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಅವರಲ್ಲಿ ಪರಿಸರ ಪ್ರಜ್ಞೆ ಬೆಳೆಸಿ, ಭವಿಷ್ಯದಲ್ಲಿ ಪರಿಸರ ರಾಯಭಾರಿಗಳನ್ನಾಗಿ ರೂಪಿಸಲು ಶಿಕ್ಷಕರು ಶ್ರಮಿಸಬೇಕು ಎಂದು ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ಪ್ರಧಾನ ಗುರು ಬಿ.ಬಿ ಕಡಬಿನ ಹೇಳಿದರು.

ಪಟ್ಟಣದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ಹಸಿರು ಪಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಕರು ಶಾಲೆಗಳಲ್ಲಿ ಪ್ಲಾಸ್ಟಿಕ್ ಮುಕ್ತ ಶಾಲಾವರಣ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಸುಂದರ ಶಾಲಾ ಕೈತೋಟ, ಔಷಧೀಯ ವನ ನಿರ್ಮಾಣ, ಶಾಲಾವರಣ, ಅಡುಗೆ ಮನೆ ಮತ್ತು ಶೌಚಾಲಯದ ಸ್ವಚ್ಛತೆಯೊಂದಿಗೆ ಶಾಲೆಯಲ್ಲಿ ಗಿಡ-ಮರಗಳನ್ನು ಬೆಳೆಸಿ ಹಸಿರು ಪರಿಸರ ನಿರ್ಮಾಣ ಮಾಡುವ ಮೂಲಕ ಪರಿಸರ ಸ್ನೇಹಿ ಶಾಲೆಗಳನ್ನಾಗಿ ರೂಪಿಸಬೇಕು. ಮಕ್ಕಳಲ್ಲಿ ಪರಿಸರದ ಅರಿವು ಮೂಡಿಸಿ ಅವರನ್ನು ಜವಾಬ್ದಾರಿಯುತ ನಾಗರಿಕರನ್ನಾಗಿ ಮಾಡುವುದು ಶಿಕ್ಷಕರ ಹೊಣೆಗಾರಿಕೆಯಾಗಿದೆ ಎಂದರು.

ಶಿಕ್ಷಕರಾದ ಎ.ಜಿ ಬೂದಿಹಾಳ ಹಾಗೂ ಹನಮಂತ ಭಜಂತ್ರಿ ಮಾತನಾಡಿ, ಶಾಲೆಗಳಲ್ಲಿ ವಿವಿಧ ಪರಿಸರ ಕಾರ್ಯಚಟುವಟಿಕೆಗಳ ಮೂಲಕ ಸುಸ್ಥಿರ ಪರಿಸರ ಸಂರಕ್ಷಣೆಗೆ ಪಣ ತೊಡಬೇಕು. ಪ್ಲಾಸ್ಟಿಕ್ ಬಳಕೆಗೆ ಪರ್ಯಾಯವಾಗಿ ಪರಿಸರ ಸ್ನೇಹಿ ವಸ್ತುಗಳನ್ನು ಬಳಕೆ ಮಾಡುವ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದರು.

ಈ ವೇಳೆ ಎಫ್.ಎಚ್ ಡಾಲಾಯತ್, ಎಸ್.ಡಿ ಕುರಿ, ಆರ್.ಎಸ್ ಶೃಂಗಾರಪುರೆ, ಡಿ.ಆರ್ ಮ್ಯಾಗೇರಿ, ಸೋಮಶೇಖರ ಸಿ, ಐ.ಎಸ್ ಬದಾಮಿ, ಎನ್.ಜಿ ಹೊಸಮನಿ ಮುಂತಾದವರಿದ್ದರು.

### ಮುಖ್ಯಾಧಿಕಾರಿಯೇ ಇಲ್ಲದೆ ಇರುವಲ್ಲಿಯೇ ನಿಂತ ಅಭಿವೃದ್ಧಿ ಕಾರ್ಯಗಳು

# ನಾವಿಕನಿಲ್ಲದ ದೋಣಿಯಂತಾದ ಪಟ್ಟಣ ಪಂಚಾಯಿತಿ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ನರೇಗಲ್ಲದ ಪಟ್ಟಣ ಪಂಚಾಯಿತಿಯ ಸದಸ್ಯರ ಅಧಿಕಾರವನ್ನು ಸರಕಾರ ಕಿತ್ತುಕೊಂಡು ಅದೆಷ್ಟೋ ತಿಂಗಳುಗಳಾಯಿತು. ಇದೀಗ ಅವರು ಹೆಸರಿಗೆ ಸದಸ್ಯರಾಗಿದ್ದರೂ ಅವರ ಬಳಿ ಯಾವ ಅಧಿಕಾರವೂ ಇಲ್ಲ. ಅಧ್ಯಕ್ಷರಾಗಲಿ, ಉಪಾಧ್ಯಕ್ಷರಾಗಲಿ ಯಾರೂ ಇಲ್ಲ. ಕಾನೂನು ಪ್ರಕಾರ ಓರ್ವ ಆಡಳಿತಾಧಿಕಾರಿಯನ್ನು ನೇಮಿಸಿದರಾಯಿತೆಂದು ತಿಳಿದ ಸರಕಾರ ಗಜೇಂದ್ರಗಡ ತಹಸೀಲ್ದಾರರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿದೆ. ಅವರಿಗೂ ಸಹ ಹಣಕಾಸಿನ ಯಾವುದೇ ಅಧಿಕಾರವಿಲ್ಲ.

ಅಲ್ಲದೆ, ನರೇಗಲ್ಲಿಗೆ ಬರುವ ಯಾವೊಬ್ಬ ಮುಖ್ಯಾಧಿಕಾರಿಯೂ ಇಲ್ಲಿ ಗಟ್ಟಿಯಾಗಿ ತಳವೂರುತ್ತಿಲ್ಲ. ಕಳೆದ ಒಂದೂವರೆ ತಿಂಗಳಿನಿಂದ ನರೇಗಲ್ಲ ಪಟ್ಟಣ ಪಂಚಾಯಿತಿಯಲ್ಲಿ ಮುಖ್ಯಾಧಿಕಾರಿಯೇ ಇಲ್ಲದಿರುವುದು ಪಟ್ಟಣದಲ್ಲಿ ಹಲವಾರು ಕೆಲಸಗಳು ಅಲ್ಲಲ್ಲಿಗೇ ನಿಂತಿವೆ.

ಈ ಹಿಂದೆ ಶಿವಾನಂದ ಅಜ್ಜಣ್ಣವರ ಎನ್ನುವ ಮುಖ್ಯಾಧಿಕಾರಿ ಕಾರ್ಯ ನಿರ್ವಹಿಸುತ್ತಿದ್ದರು. ಅವರು




ಸೆ.7ರಿಂದ ರಜೆಯಲ್ಲಿದ್ದಾರೆ. ಸೆ.15ಕ್ಕೆ ಮುಳಗುಂದದ ಮಂಜುನಾಥ ಗುಳೇದ ಎನ್ನುವವರಿಗೆ ಎರಡೂ ಕಡೆ ಕೆಲಸ ಮಾಡಲು ಜಿಲ್ಲಾಧಿಕಾರಿಗಳು ಆದೇಶಿಸಿದ್ದರು. ಒಂದು ದಿನ ಬಂದ ಅವರು ಮತ್ತೆ ಇತ್ತ ಮುಖಮಾಡಿಲ್ಲ ಎಂಬುದು ಸಾರ್ವಜನಿಕರ ದೂರಾಗಿದೆ.

**ಆರು ತಿಂಗಳಿನಿಂದ ಸಂಬಳವಿಲ್ಲ:** ನರೇಗಲ್ಲ ಪಟ್ಟಣ ಪಂಚಾಯಿತಿಯಲ್ಲಿ 36 ಜನ ಪೌರ ಕಾರ್ಮಿಕರಿದ್ದಾರೆ. ನೀರು ಸರಬರಾಜು ಮಾಡುವ, ದೀಪದ ವ್ಯವಸ್ಥೆ ಮಾಡುವ 12 ಸಿಬ್ಬಂದಿಗಳು ಹಾಗೂ ಮೂವರು ಚಾಲಕರಿದ್ದಾರೆ. ಈ ಎಲ್ಲ ಕುಟುಂಬಗಳಿಗೆ ಕಳೆದ ಆರು ತಿಂಗಳಿನಿಂದ ಸಂಬಳ ಸಂದಾಯವಾಗಿಲ್ಲ. ಈ ಅವ್ಯವಸ್ಥೆಗೂ ಮುಖ್ಯಾಧಿಕಾರಿಗಳಿಲ್ಲದಿರುವುದೇ ಕಾರಣವಾಗಿದೆ. ಪ.ಪಂನಲ್ಲಿ 17 ಖಾಯಂ ನೌಕರರು, ಗುತ್ತಿಗೆ ಆಧಾರದ ಮೇಲೆ ಇಬ್ಬರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರಿಗೂ ಸಂಬಳವಾಗಿಲ್ಲ. ಗಜೇಂದ್ರಗಡದಿಂದ ನರೇಗಲ್ಲ ಮಾರ್ಗವಾಗಿ ಗದಗಕ್ಕೆ ತೆರಳಿದ ಜಿಲ್ಲಾಧಿಕಾರಿಗಳು ಒಂದಷ್ಟು ಹೊತ್ತು ನಿಲ್ಲದೆ ನೇರವಾಗಿ ಗದಗಿಗೆ ತೆರಳಿದ್ದು ಎಲ್ಲರಿಗೂ ನಿರಾಶೆಯನ್ನು ಮೂಡಿಸಿತ್ತು. ಹೀಗಾದರೆ ಸಾರ್ವಜನಿಕರು ತಮ್ಮ ನೋವುಗಳನ್ನು ಯಾರ ಹತ್ತಿರ ಹೇಳಿಕೊಳ್ಳಬೇಕು ಎಂಬುದು ಯಕ್ಷ ಪ್ರಶ್ನೆಯಾಗಿದೆ.

ಪಟ್ಟಣ ಪಂಚಾಯಿತಿಯಲ್ಲಿ ಮುಖ್ಯಾಧಿಕಾರಿ ಇಲ್ಲದಿರುವುದರಿಂದ ಜನನ ಪ್ರಮಾಣ ಪತ್ರ, ಆಸ್ತಿ ಖಾತೆ ಉತಾರ, ಆಸ್ತಿ ಖಾತೆ ವರ್ಗಾವಣೆ ಇತ್ಯಾದಿ ಕಾರ್ಯಗಳು ಹಾಗೆಯೇ ನಿಂತಿವೆ. ನಿತ್ಯವೂ ನೂರಾರು ಸಾರ್ವಜನಿಕರು ಪ.ಪಂ ಕಚೇರಿಗೆ ಎಡತಾಕುತ್ತಿದ್ದು, ತಮ್ಮ ದಾಖಲೆಗಳಿಗೆ ಸಹಿ ಮಾಡುವ ಅಧಿಕಾರಿಯೇ ಇಲ್ಲದೆ ಪೇಚಿಗೆ ಸಿಲುಕಿದ್ದಾರೆ.

> ಸಾರ್ವಜನಿಕರ ಕೆಲಸಗಳು ನಿಂತಿವೆ. ಊರ ಅಭಿವೃದ್ಧಿ ಶೂನ್ಯವಾಗಿದೆ. ಊರಿನ ಗಟಾರಗಳಲ್ಲಿ ಗಬ್ಬೆದ್ದು ನಾರುತ್ತಿವೆ. ಬರುವ ಮುಖ್ಯಾಧಿಕಾರಿಗಳು ಬಹಳಷ್ಟು ಜತನದಿಂದ ಕಾರ್ಯ ನಿರ್ವಹಿಸಬೇಕಿದೆ.
>
> **-ಬಸವರಾಜ ಹತ್ತಿಕಟಗಿ.** ಗುತ್ತಿಗೆದಾರರು.

> ಪಂಚಾಯಿತಿಗೆ ಮುಖ್ಯಸ್ಥರೇ ಇಲ್ಲದ್ದರಿಂದ ಸಿಬ್ಬಂದಿಗಳು ತಮಗೆ ತಿಳಿದಷ್ಟು ಕಾರ್ಯ ನಿರ್ವಹಿಸುತ್ತಿದ್ದಾರೆ. ಎಲ್ಲ ಓಣಿಗಳಲ್ಲಿ ಬೀದಿ ದೀಪಗಳಿಲ್ಲ, ಗಟಾರಗಳು ತುಂಬಿ ಹರಿಯುತ್ತಿವೆ. ಸಾರ್ವಜನಿಕರ ಆರೋಗ್ಯಕ್ಕೆ ಕುತ್ತು ಬಂದೊದಗಿದೆ.
>
> **-ವೀರಪ್ಪ ಕುಂಬಾರ.** ನಿವೃತ್ತ ಸೈನಿಕ.

> ನಾನೇ ಸ್ವತಃ ಕೈಯಿಂದ ಹಣ ಹಾಕಿ ಬೀದಿ ದೀಪದ ವ್ಯವಸ್ಥೆಯನ್ನು ಸಾಧ್ಯವಾದಷ್ಟು ಮಾಡಿದೆ. ಇತರೆ ಕಾರ್ಯಗಳಿಗೆ ವಾಹನ ಬೇಕಾದಾಗ ಅವುಗಳಿಗೆ ಡೀಸೆಲ್ಲನ್ನು ಹಾಕಿಸಿದೆ. ಆದರೆ ಈ ಕಾರ್ಯವನ್ನು ನಾನೊಬ್ಬನೇ ಎಷ್ಟು ದಿನ ಮಾಡಲು ಸಾಧ್ಯ? ಇಲ್ಲಿಗೆ ಒಬ್ಬ ಖಾಯಂ ಮುಖ್ಯಾಧಿಕಾರಿ ಬೇಕು. ಏಕೆಂದರೆ ಈ ಪಟ್ಟಣ ಪಂಚಾಯಿತಿಗೆ ಕೇವಲ ನರೇಗಲ್ಲ ಮಾತ್ರವಲ್ಲದೆ ಐದು ಮಜಿರೆ ಹಳ್ಳಿಗಳಿವೆ.
>
> **-ಕುಮಾರಸ್ವಾಮಿ ಕೋರಧಾನ್ಯಮಠ.** ಪ.ಪಂ ಸದಸ್ಯರು.

### ಕೃಷಿ ಇಲಾಖೆಯಿಂದ ರೈತರಿಗೆ ಉಚಿತ ಜೋಳದ ಬೀಜಗಳ ವಿತರಣೆ

## ಬರ ನಿರ್ವಹಣಾ ಕ್ರಮಗಳಿಗೆ ಮುಂದಾಗಿ



■ವಿಜಯಸಾಕ್ಷಿ ಸುದ್ದಿ, ಗದಗ

ಸಮೀಪದ ತಿಮ್ಮಾಪೂರ ಗ್ರಾಮದಲ್ಲಿ 2023-24ನೇ ಸಾಲಿನ ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ ಯೋಜನೆಯಡಿ ಜೋಳ ಬೆಳೆಯ ಪ್ರಾತ್ಯಕ್ಷಿಕೆ ಕಾರ್ಯಕ್ರಮದ ಅಂಗವಾಗಿ ಜೋಳದ ಬಿತ್ತನೆ ಬೀಜ(ಬಿಜಿ-2217) ಗಳ ಕಿರುಚೀಲಗಳನ್ನು ರೈತರಿಗೆ ಬೆಟಗೇರಿ ಹೋಬಳಿ ಕೃಷಿ ಅಧಿಕಾರಿ ವೀರಣ್ಣ ಗಡಾದ ವಿತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಪ್ರಸ್ತುತ ಬರ ಆವರಿಸಿರುವುದರಿಂದ ರೈತರು ಹತಾಶೆಗೊಳಗಾಗಬಾರದೆಂದು ಕೃಷಿ ಇಲಾಖೆಯಿಂದ ಉಚಿತವಾಗಿ ಜೋಳದ ಬೀಜಗಳನ್ನು ವಿತರಿಸಲಾಗಿದೆ. ರೈತರು ಪರ್ಯಾಯ ಬೆಳೆ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಮಣ್ಣು ಮತ್ತು ನೀರು ಸಂರಕ್ಷಣೆ, ತೇವಾಂಶ ನಿರ್ವಹಣೆಗೆ, ಹಸಿರೆಲೆ ಗೊಬ್ಬರ ಹಾಗೂ ಕೊಟ್ಟಿಗೆ ಗೊಬ್ಬರ ಬಳಕೆ ಮುಂತಾದ ಬರ ನಿರ್ವಹಣಾ ಕ್ರಮಗಳಿಗೆ ಮುಂದಾಗಬೇಕು. ಕೃಷಿ ಮತ್ತು ಸಂಬಂಧಿತ ಇಲಾಖೆಗಳ ಸೌಲಭ್ಯ ಪಡೆಯಲು ಬೆಳೆ ಸಮೀಕ್ಷೆ ಮಾಡಿಸುವುದು ಕಡ್ಡಾಯವಾಗಿದೆ ಎಂದರಲ್ಲದೆ, ರೈತರಿಗೆ ಬೆಳೆ ಸಮೀಕ್ಷೆ ಮೊಬೈಲ್ ಅಪ್ಲಿಕೇಶನ್ ಬಳಕೆಯ ಕುರಿತು ಮಾಹಿತಿ ನೀಡಿದರು.

ಕರ್ನಾಟಕ ರಾಜ್ಯ ರೈತ ಸಂಘದ ಗದಗ ಜಿಲ್ಲಾಧ್ಯಕ್ಷ ಯಲ್ಲಪ್ಪ ಎಚ್.ಬಾಬರಿ ಮಾತನಾಡಿ, ರಾಜ್ಯದಲ್ಲಿ ಬರ ನಿರ್ವಹಣೆಗೆ ಸರಕಾರ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಈಗಾಗಲೇ ಎನ್‌ಡಿಆರ್‌ಎಫ್ ಕೇಂದ್ರ ತಂಡ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಭೇಟಿ ನೀಡಿ ಬರ ಅಧ್ಯಯನ ನಡೆಸಿ, ಶೀಘ್ರವೇ ಬರ ಪರಿಹಾರವನ್ನು ನೀಡಲು ಜಿಲ್ಲಾಡಳಿತಕ್ಕೆ ಸೂಚನೆ ನೀಡಿದೆ. ಕೃಷಿ ಇಲಾಖೆಯಿಂದ ಈಗಾಗಲೇ ರಿಯಾಯಿತಿ ದರದಲ್ಲಿ ಬೀಜ, ರಸಗೊಬ್ಬರ, ಕೀಟನಾಶಕಗಳನ್ನು ವಿತರಣೆ ಮಾಡುತ್ತಿದ್ದು, ರೈತರು ಈ ಯೋಜನೆಗಳ ಪ್ರಯೋಜನ ಪಡೆಯಬೇಕು ಎಂದರು.

ಈ ಸಂದರ್ಭದಲ್ಲಿ ರೈತರಾದ ನಿಂಗಪ್ಪ ರವದಿ, ರಮೇಶ ಜೋಗಿನ, ದ್ಯಾಮಣ್ಣ ಹುಲಿ, ಮಲ್ಲಪ್ಪ ಉಳಗೇರ, ಉದಯ ಗಂಗರಾತ್ರಿ, ವೆಂಕಟೇಶ ಪೂಜಾರ, ರಾಮಣ್ಣ ಖಂಡ್ರಿ ಶಶಿಕಾಂತ ಬಿಸನಳ್ಳಿ, ಕಪತ್ತಪ್ಪ ಸೋಂಪೂರ ಮುಂತಾದವರು ಪಾಲ್ಗೊಂಡಿದ್ದರು.

## ಮಳೆಗಾಗಿ ಪ್ರಾರ್ಥಿಸಿ ಪಲ್ಲಕ್ಕಿ ಮೆರವಣಿಗೆ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಶಿಗ್ಲಿ ಗ್ರಾಮದ ರೈತ ಸಮುದಾಯ ಮಂಗಳವಾರ ಮಳೆರಾಯನ ಕೃಪೆಗಾಗಿ ಗ್ರಾಮದ ಹಾಲಸ್ವಾಮಿಗಳ ಪಲ್ಲಕ್ಕಿ ಮೆರವಣಿಗೆ ಸಂಪ್ರದಾಯ ನೆರವೇರಿಸಿದರು.

ಕಳೆದ ಎರಡೂವರೆ ತಿಂಗಳಿಂದ ಹನಿ ಮಳೆಯೂ ಇಲ್ಲದೇ ಮುಂಗಾರಿನ ಬೆಳೆ ಒಣಗಿವೆ ಮತ್ತು ಇದೀಗ ಹಿಂಗಾರಿ ಬಿತ್ತನೆ ಕಾಲವೂ ಮುಗಿಯುತ್ತಾ ಬಂದಿದ್ದು, ಮಳೆಗಾಗಿ ಪ್ರಾರ್ಥಿಸಿ ರೈತ ಸಮುದಾಯ ಪಲ್ಲಕ್ಕಿ ಸೇವಾ ಕಾರ್ಯ ಮಾಡಿದರು.

ಮಳೆ ಕೈಕೊಟ್ಟಾಗ ಈ ರೀತಿ ಪಲ್ಲಕ್ಕಿ ಮೆರವಣಿಗೆ ಮಾಡಿದರೆ ಮಳೆ ಆಗುತ್ತದೆ ಎಂಬ ನಂಬಿಕೆ ಈ ಭಾಗದ ರೈತರಲ್ಲಿದೆ. ಗ್ರಾಮದ ಹಾಲಸ್ವಾಮಿ ಮಠದಿಂದ ಪಲ್ಲಕ್ಕಿ ಮೆರವಣಿಗೆ ನಡೆಯುವುದು ಹಿಂದಿನಿಂದ ನಡೆದು ಬಂದ ಸಂಪ್ರದಾಯ. ತಾಲ್ಲೂಕಿನ ಸಂಕದಾಳ ಗ್ರಾಮದಲ್ಲಿ ಹಾಲಸ್ವಾಮಿಗಳ ಮೂಲಮಠವಿದ್ದು, ಮಠದ ಸ್ವಾಮಿಗಳ ಸಂಕಲ್ಪ, ಸೂಚನೆಯ ಮೇರೆಗೆ ಗ್ರಾಮಸ್ಥರು ಪಲ್ಲಕ್ಕಿ ಮೆರವಣಿಗೆ ನಡೆಸಿಕೊಂಡು ಬರುತ್ತಿದ್ದಾರೆ. ಊರಿನ ರೈತರು ಹಾಲಸ್ವಾಮಿಗಳ ಮೂರ್ತಿಯನ್ನು ಪಲ್ಲಕ್ಕಿಯಲ್ಲಿರಿಸಿ ಗ್ರಾಮದ ಪ್ರಮುಖ ಮಾರ್ಗದಲ್ಲಿ ಸುತ್ತಾಡುತ್ತಾರೆ. ಪಲ್ಲಕ್ಕಿ ಮನೆ ಎದುರು ಬಂದಾಗ ನಿವಾಸಿಗಳು ಒಂದು ಕೊಡ ನೀರು ಹಾಕಿ ಪೂಜೆ ಸಲ್ಲಿಸಿ ಮಳೆಗಾಗಿ ಪ್ರಾರ್ಥಿಸುತ್ತಾರೆ. ಈ ಮೊದಲು ಐದು ಅಥವಾ ಹನ್ನೊಂದು ದಿನಗಳವರೆಗೆ ಪಲ್ಲಕ್ಕಿ ಮೆರವಣಿಗೆ ನಡೆಯುತ್ತಿತ್ತು. ಆದರೆ ಇದೀಗ ಅದನ್ನು ಒಂದು ದಿನದ ಮಟ್ಟಿಗೆ ನೆರವೇರಿಸಲಾಗುತ್ತಿದೆ. ಭಕ್ತಿಯಿಂದ ಪಲ್ಲಕ್ಕಿ ಉತ್ಸವ ಮಾಡಿದರೆ ಮಳೆ ಆದ ಉದಾಹರಣೆಗಳೂ ಇವೆ. ಈಗಲೂ ಇದನ್ನೇ ಮುಂದುವರೆಸಿಕೊಂಡು ಬಂದಿದ್ದೇವೆ ಎಂದು ಗ್ರಾಮದ ಹಿರಿಯರಾದ ಶಿವಣ್ಣ ಕೆಸರಳ್ಳಿ ತಿಳಿಸಿದರು.

ಗ್ರಾಮಸ್ಥರಾದ ಮಹಾದೇವಪ್ಪ ಬೆಳವಗಿ, ಅಶೋಕ ಹುಲಗೂರ, ಮಹಾದೇವಪ್ಪ ಹುಲಗೂರ, ಮುದಕಣ್ಣ ಹುಲಕೋಟಿ, ಅಣ್ಣಗೇರಿ, ಶಂಕರ ಅಳ್ಳಳ್ಳಿ, ರವಿ ಕೂಸನೂರ, ನೀಲನಗೌಡ ಪಾಟೀಲ, ವೀರಣ್ಣ ಪವಾಡದ ಇದ್ದರು.

## ಆನ್‌ಲೈನ್ ಮೂಲಕ ಅರ್ಜಿಗಳ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದಿಂದ 2023-24ನೇ ಸಾಲಿನಲ್ಲಿ ಗಂಗಾ ಕಲ್ಯಾಣ ನೀರಾವರಿ ಯೋಜನೆ, ಸ್ವಯಂ ಉದ್ಯೋಗ ನೇರ ಸಾಲ ಮತ್ತು ಸಹಾಯಧನ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ (ನವೀಕರಣ), ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಆರ್ಥಿಕ ನೆರವು, ಸ್ವಯಂ ಉದ್ಯೋಗ ಸಾಲ ಯೋಜನೆ ( ವಾಣಿಜ್ಯ ಬ್ಯಾಂಕ್‌ಗಳ ಸಹಯೋಗದೊಂದಿಗೆ ), ಸ್ವಾವಲಂಬಿ ಸಾರಥಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಯೋಜನೆಗಳಡಿ ಸಾಲ-ಸೌಲಭ್ಯ ಪಡೆಯಲು ಸರ್ಕಾರದ ಆದೇಶದನ್ವಯ ಪ್ರವರ್ಗ-1ರ 6(a) ಯಿಂದ 6(ak)ವರೆಗೆ ಬರುವ ಬೆಸ್ತ, ಅಂಬಿಗ/ಅಂಬಿ, ಗಂಗಾಮತ, ಕಬ್ಬಲಿಗ, ಕೋಲಿ, ಮೊಗವೀರ ಮತ್ತು ಇದರ ಉಪ ಜಾತಿಗಳಿಗೆ ಒಳಪಡುವ ಅರ್ಹ ಫಲಾಪೇಕ್ಷಿಗಳಿಂದ ಅರ್ಜಿಗಳನ್ನು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಸಲ್ಲಿಸಬೇಕಾಗಿರುತ್ತದೆ. ಅರ್ಜಿ ಸಲ್ಲಿಸಲು ನವೆಂಬರ್ 2 ಕೊನೆಯ ದಿನವಾಗಿದ್ದು, ಸೇವಾಸಿಂಧು ಪೋರ್ಟಲ್ ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. (ಅರಿವು ಶೈಕ್ಷಣಿಕ ಸಾಲ ಯೋಜನೆಗಳಿಗೆ ಕೊನೆಯ ದಿನಾಂಕ ಇರುವುದಿಲ್ಲ) ಹೆಚ್ಚಿನ ಮಾಹಿತಿಯನ್ನು ನಿಗಮದ ವೆಬ್ ಸೈಟ್ http://ambigaradevelopment.karnataka.gov.in ರಲ್ಲಿ ಪಡೆಯಬಹುದಾಗಿದೆ.

## ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ರೈತರಿಂದ ರಸ್ತೆ ತಡೆ, ಪ್ರತಿಭಟನೆ



■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ನೀರಾವರಿ ಪಂಪ್‌ಸೆಟ್‌ಗಳಿಗೆ 7 ಗಂಟೆ ತ್ರೀಫೇಸ್ ವಿದ್ಯುತ್ ಪೂರೈಸಬೇಕು ಎಂದು ಒತ್ತಾಯಿಸಿ ರೈತರು ಮಂಗಳವಾರ ಸ್ಥಳೀಯ ವಿದ್ಯುತ್ ಪ್ರಸರಣ ಘಟಕದ ಮುಂದಿರುವ ಹೆದ್ದಾರಿ ಸಂಚಾರ ಬಂದ್ ಮಾಡಿ ಪ್ರತಿಭಟನೆ ನಡೆಸಿದರು.

ನೀರಾವರಿ ಪಂಪ್‌ಸೆಟ್‌ಗಳಿಗೆ 7 ಗಂಟೆ ನಿರಂತರ ತ್ರೀಫೇಸ್ ವಿದ್ಯುತ್ ನೀಡಬೇಕು. ಹೆಸ್ಕಾಂ ಎಂಡಿ ಅವರು ಸ್ಥಳಕ್ಕೆ ಬಂದು ಇಂದಿನಿಂದಲೇ ಸಮರ್ಪಕವಾಗಿ ವಿದ್ಯುತ್ ಪೂರೈಸುವ ಬಗ್ಗೆ ಸೂಕ್ತ ಭರವಸೆ ನೀಡಬೇಕು ಎಂದು ರೈತರು ಒತ್ತಾಯಿಸಿದರು.

ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಿದ್ದರಿಂದ ಹೆಸ್ಕಾಂ ಕಚೇರಿ ಮುಂದೆ ಪ್ರತಿಭಟಿಸಿದಾಗ ಹೆಸ್ಕಾಂ ಅಧಿಕಾರಿಗಳು ಅ.9ರಿಂದ 7 ಗಂಟೆ ತ್ರೀಫೇಸ್ ವಿದ್ಯುತ್ ಪೂರೈಸಲಾಗುವುದು ಎಂದು ಭರವಸೆ ನೀಡಿದ್ದರು. ಇಂದು ಬೆಳಗ್ಗೆ 1 ಗಂಟೆ ತ್ರೀಫೇಸ್ ನೀಡಿ ಮತ್ತೆ ನಿಲ್ಲಿಸಿದ್ದಾರೆ. ಇದರಿಂದ ರೈತರಿಗೆ ತೊಂದರೆಯಾಗುತ್ತಿದ್ದು, ಬೆಳೆಗಳೆಲ್ಲ ಒಣಗುತ್ತಿವೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ಹೆಸ್ಕಾಂ ಅಧೀಕ್ಷಕ ಇಂಜಿನಿಯರ್ ಶರಣಮ್ಮ, ಇಇ ರಾಜೇಶ ಕಲ್ಯಾಣಶೆಟ್ಟರ, ಎಇಇ ಚನ್ನಪ್ಪ ಲಮಾಣಿ, ತಹಸೀಲ್ದಾರ್ ಧನಂಜಯ್ ಸ್ಥಳಕ್ಕೆ ಭೇಟಿ ನೀಡಿ ಚರ್ಚಿಸಿದರು. ವಿದ್ಯುತ್ ಸ್ಥಾವರದಲ್ಲಿ ಉತ್ಪಾದನೆ ಕಡಿತವಾದ ಕಾರಣ ವಿದ್ಯುತ್ ಪೂರೈಕೆಗೆ ತೊಂದರೆಯಾಗಿತ್ತು. ಇದೀಗ ಎಲ್ಲವೂ ಸರಿಯಾಗಿದ್ದು, ಸದ್ಯಕ್ಕೆ 5 ಗಂಟೆ ತ್ರೀಫೇಸ್ ವಿದ್ಯುತ್ ಪೂರೈಕೆ ಮಾಡಿ, ಗುರುವಾರದಿಂದ 7 ಗಂಟೆ ತ್ರೀಫೇಸ್ ವಿದ್ಯುತ್ ನೀಡಲಾಗುವುದು ಎಂದು ದೂರವಾಣಿ ಮೂಲಕ ಎಂಡಿ ಮಹ್ಮದ್ ರೋಷನ್ ಭರವಸೆ ನೀಡಿದ ನಂತರ ರೈತರು ಪ್ರತಿಭಟನೆ ಕೈಬಿಟ್ಟರು.

ಶಿವಾನಂದ ಇಟಗಿ, ವೀರನಗೌಡ ಪಾಟೀಲ, ಶರಣಪ್ಪ ಕಂಬಳಿ, ಡಿ.ಡಿ ಮೋರನಾಳ, ಚಂದ್ರಕಾಂತ ಉಳ್ಳಾಗಡ್ಡಿ, ಶರಣಪ್ಪ ಚೆನ್ನಳ್ಳಿ, ದೇವಪ್ಪ ಡೊಣ್ಣಿ, ಅಶ್ವಿನಿ ಗೌಡರ, ದೇವಪ್ಪ ಚಿಕ್ಕಣ್ಣವರ, ಪ್ರಕಾಶ ಸಜ್ಜನರ, ರವಿ ಕೊಳಲು, ಸಿದ್ದಪ್ಪ ಪೂಜಾರ, ಬಸವರಾಜ ತಳವಾರ, ಬಾಬುಜೀ ಮದ್ಯಪಾಟಿ, ಈರಣ್ಣ ಶೀರಿ, ತಿಪ್ಪಣ್ಣ ಮಸಾಲಿ ಮುಂತಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದಿಂದ 2023-24ನೇ ಸಾಲಿನಲ್ಲಿ ಪಂಚವೃತ್ತಿ ಅಭಿವೃದ್ಧಿಗಾಗಿ ಆರ್ಥಿಕ ನೆರವು, ಸ್ವಯಂ ಉದ್ಯೋಗ ನೇರಸಾಲ ಯೋಜನೆ, ಅರಿವು-ಶೈಕ್ಷಣಿಕ ನೇರಸಾಲ ಯೋಜನೆ (ಹೊಸದು), ಅರಿವು-ಶೈಕ್ಷಣಿಕ ನೇರಸಾಲ ಯೋಜನೆ (ನವೀಕರಣ) , ಗಂಗಾ ಕಲ್ಯಾಣ ಯೋಜನೆ. (ಈ ಯೋಜನೆಯಲ್ಲಿ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು. ಇತರೇ ಜಿಲ್ಲೆಗಳಲ್ಲಿ ಕನಿಷ್ಠ 2 ಎಕರೆ ಹೊಂದಿರಬೇಕು) ಸ್ವಯಂ ಉದ್ಯೋಗ ನೇರಸಾಲ (ಬ್ಯಾಂಕ್‌ಗಳ ಸಹಯೋಗದೊಂದಿಗೆ) , ಸ್ವಾವಲಂಬಿ ಸಾರಥಿ ಯೋಜನೆ. ವಿದೇಶಿ ವ್ಯಾಸಂಗ ಯೋಜನೆಗಳ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅಕ್ಟೋಬರ್ 31ಕೊನೆಯ ದಿನವಾಗಿರುತ್ತದೆ. (ಶೈಕ್ಷಣಿಕ ಸಾಲ ಯೋಜನೆಗಳಿಗೆ ಕೊನೆ ದಿನಾಂಕ ಇರುವುದಿಲ್ಲ) ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು. ನಿಗಮದ ಯೋಜನೆಗಳಲ್ಲಿ ಸೌಲಭ್ಯಗಳನ್ನು ಪಡೆಯಲು ಇಚ್ಛಿಸುವವರು ಸರ್ಕಾರದ ಆದೇಶದನ್ವಯ ವಿಶ್ವಕರ್ಮ ಸಮುದಾಯ ಹಾಗೂ ಅದರ ಉಪ ಜಾತಿಗಳಿಗೆ ಸೇರಿರಬೇಕು. ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಕಡ್ಡಾಯವಾಗಿರುತ್ತದೆ. ವಯೋಮಿತಿ 18 ವರ್ಷಗಳಿಂದ 55 ವರ್ಷಗಳ ಮಿತಿಯಲ್ಲಿರಬೇಕು. ನಿಗಮದ/ಸರ್ಕಾರದ ಯಾವುದಾದರೂ ಯೋಜನೆಗಳಡಿ ಈ ಹಿಂದೆ ಸೌಲಭ್ಯ ಪಡೆದಿರಬಾರದು. ಕುಟುಂಬದ ಒಬ್ಬರಿಗೆ ಮಾತ್ರ ಸೌಲಭ್ಯ ಒದಗಿಸಲಾಗುವುದು. ಅರಿವು ಯೋಜನೆಯಡಿ ವಯೋಮಿತಿ 18 ವರ್ಷಗಳಿಂದ 30 ವರ್ಷಗಳ ಮಿತಿಯಲ್ಲಿರಬೇಕು ವಾರ್ಷಿಕ ವರಮಾನ ರೂ.3.50/-ಲಕ್ಷಗಳು. ಸ್ವಾವಲಂಬಿ ಸಾರಥಿ ಯೋಜನೆಯಡಿ ಅರ್ಜಿದಾರರು 21 ವರ್ಷ ಮೇಲ್ಪಟ್ಟು 45 ವರ್ಷದ ಮಿತಿಯಲ್ಲಿರಬೇಕು. ಅರ್ಜಿದಾರರು ತಮ್ಮ ಮೊಬೈಲ್ ಸಂಖ್ಯೆಯನ್ನು ಹಾಗೂ ಬ್ಯಾಂಕ್ ಖಾತೆಯನ್ನು ತಮ್ಮ ಆಧಾರ ಸಂಖ್ಯೆಗೆ ಜೋಡಣೆ ಮಾಡಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ರೂ. 98,000/- ಮತ್ತು ನಗರ ಪ್ರದೇಶದವರಿಗೆ ರೂ. 1,20,000/-ಗಳ ಮಿತಿಯೊಳಗಿರಬೇಕು.

ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್: https://kvcdcl.karnataka.gov.in. ರಲ್ಲಿ ಅಥವಾ ನಿಗಮದ ಕೇಂದ್ರ ಕಚೇರಿಯ ದೂರವಾಣಿ ಸಂಖ್ಯೆ 080-22374848/7899899039 ಜಿಲ್ಲಾ ಕಛೇರಿ ದೂರವಾಣಿ ಸಂ:08372-232327 ಕಚೇರಿಗಳಲ್ಲಿ ಪೂರ್ವಾಹ್ನ 10.00ರಿಂದ ಸಂಜೆ 5.30 ರವರೆಗೆ ಸಂಪರ್ಕಿಸಿ ಪಡೆಯಬಹುದಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಲಾದ ಅರ್ಜಿಯನ್ನು ನಿಗಮದ ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ರೂ.ನಂ:202, 2ನೇ ಮಹಡಿ, ಜಿಲ್ಲಾ ಆಡಳಿತ ಭವನ, ಹುಬ್ಬಳ್ಳಿ ರಸ್ತೆ, ಗದಗ ಇಲ್ಲಿ ಸಲ್ಲಿಸಬಹುದಾಗಿದೆ.

## ಆರೋಪಿತರಿಗೆ ಶಿಕ್ಷೆ ಪ್ರಕಟ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯ ಹರ್ತಿ ಗ್ರಾಮದಲ್ಲಿ ವ್ಯಕ್ತಿಯೊಬ್ಬರ ಮೇಲೆ ಅವಾಚ್ಯವಾಗಿ ಬೈದಾಡಿ, ಹಲ್ಲೆ ನಡೆಸಿ, ಗಂಭೀರ ಸ್ವರೂಪದ ಗಾಯಪಡಿಸಿದ ಆರೋಪಿತನಿಗೆ ಗದುಗಿನ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಶಿಕ್ಷೆ ವಿಧಿಸಿದೆ.

ಹರ್ತಿ ಗ್ರಾಮದ ಸರ್ವೆ ನಂ. 251ರ ಜಮೀನಿನಲ್ಲಿ 31.3.2018ರ ರಾತ್ರಿ 10 ಗಂಟೆಗೆ ಪ.ಜಾತಿಗೆ ಸೇರಿದ ದೂರುದಾರ ತೋಟಕ್ಕೆ ನೀರು ಹಾಯಿಸಲು ಹೊರಟಿದ್ದಾಗ, ಆತನ ಅಭಿವೃದ್ಧಿಯನ್ನು ಸಹಿಸದ ಅವನ ಸಮಾಜದ ಮಹಿಳೆಯೊಬ್ಬಳನ್ನು ಕೆಟ್ಟ ದೃಷ್ಟಿಯಿಂದ ನೋಡಿದ್ದರಿಂದ ಆರೋಪಿತ ಪ್ರಕಾಶ ಪರಮೇಶ್ವರ ಲದ್ದಿ ಹಾಗೂ ಪ್ರಕಾಶ ಪರಮೇಶ್ವರ ಲದ್ದಿ ಎಂಬುವರಿಗೆ ಫಿರ್ಯಾದಿಯು ಬುದ್ಧಿ ಹೇಳಿದ್ದಕ್ಕೆ ಸಿಟ್ಟಾಗಿ, ಅವಾಚ್ಯವಾಗಿ ಬೈದು, ಅವನ ಮೇಲೆ ಕಲ್ಲುಗಳನ್ನು ಎತ್ತಿಹಾಕಿ, ಭಾರೀ ಸ್ವರೂಪದಲ್ಲಿ ಗಾಯಪಡಿಸಿದ ಅಪರಾಧದ ಕುರಿತು ಗದಗ ಉಪ ವಿಭಾಗದ ಉಪ ಆರಕ್ಷಕ ಅಧೀಕ್ಷಕರಾದ ವಿಜಯಕುಮಾರ ವಿ.ಟಿ ತನಿಖೆ ಪೂರೈಸಿ, ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಸಾಕ್ಷಿ ವಿಚಾರಣೆ ನಡೆಸಿದ ಗದುಗಿನ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ರಾಜೇಶ್ವರ ಎಸ್.ಶೆಟ್ಟಿ ಇವರು, ಸದರಿ ಪ್ರಕರಣದಲ್ಲಿ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿತರಾದ ಪ್ರಕಾಶ ಪರಮೇಶ್ವರ ಲದ್ದಿ ಹಾಗೂ ಪ್ರಕಾಶ ಪರಮೇಶ್ವರ ಲದ್ದಿ ಇವರಿಗೆ ಅ.9ರಂದು ಕಲಂ.323 ಅಡಿಯಲ್ಲಿ 6 ತಿಂಗಳ ಸಾದಾ ಸಜೆ ಹಾಗೂ 500 ರೂ ದಂಡ, ಕಲಂ.341ರ ಅಡಿಯಲ್ಲಿ 1 ವರ್ಷ ಸಾದಾ ಸಜೆ ಹಾಗೂ 500 ರೂ ದಂಡ, ಕಲಂ.504ರಡಿ 1 ತಿಂಗಳ ಸಾದಾ ಸಜೆ ಹಾಗೂ 5 ಸಾವಿರ ರೂ ದಂಡ, ಹಾಗೂ ಕಲಂ.3(2)(ವಿಎ) ಪಜಾ/ಪಪಂ ಕಾಯ್ದೆ ಅಡಿಯಲ್ಲಿ 1 ವರ್ಷ ಸಾದಾ ಶಿಕ್ಷೆ ಹಾಗೂ 5 ಸಾವಿರ ರೂ ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ಸದರಿ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಮಲ್ಲಿಕಾರ್ಜುನಗೌಡ ಬಸವನಗೌಡ ದೊಡ್ಡಗೌಡ್ರ ಸಾಕ್ಷಿ ವಿಚಾರಣೆ ಮಾಡಿ ವಾದ ಮಂಡಿಸಿದ್ದರು.

## ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದಿಂದ ವಿವಿಧ ಸೌಲಭ್ಯಗಳಿಗಾಗಿ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದಿಂದ 2023-24ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ(ನೂತನ), ಗಂಗಾ ಕಲ್ಯಾಣ ನೀರಾವರಿ ಯೋಜನೆ (ಈ ಯೋಜನೆಯಲ್ಲಿ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು ಇತರೇ ಜಿಲ್ಲೆಗಳಲ್ಲಿ ಕನಿಷ್ಠ 2ಎಕರೆ ಹೊಂದಿರಬೇಕು.) ಸ್ವಯಂ ಉದ್ಯೋಗ ನೇರ ಸಾಲ (ಬ್ಯಾಂಕ್‌ಗಳ ಸಹಯೋಗದೊಂದಿಗೆ) ಸ್ವಾವಲಂಬಿ ಸಾರಥಿ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವಾಗ ಅರ್ಜಿದಾರರು ಕಡ್ಡಾಯವಾಗಿ ಆಧಾರ ಕಾರ್ಡ್‌ನಲ್ಲಿರುವಂತೆ ಅರ್ಜಿದಾರರ ಹೆಸರು/ವಿಳಾಸ/ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮತ್ತು ಬ್ಯಾಂಕ್ ಪಾಸ್ ಪುಸ್ತಕಗಳಲ್ಲಿ ತಾಳೆಯಾಗಬೇಕು. ಆನ್‌ಲೈನ್ ಮೂಲಕ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ನವೆಂಬರ್ 3 ಆಗಿದ್ದು, ಅರಿವು ಶೈಕ್ಷಣಿಕ ಸಾಲ ಯೋಜನೆಗಳಿಗೆ ಕೊನೆಯ ದಿನಾಂಕ ಇರುವುದಿಲ್ಲ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ ವಿಳಾಸ http://upparadevelopment.karnataka.gov.in ಸಂಪರ್ಕಿಸಬಹುದಾಗಿದೆ.

## ಅ.18ರಿಂದ ಯುವ ದಸರಾ: ಸೀಮಾ ಲಾಟ್ಕರ್

■ವಿಜಯಸಾಕ್ಷಿ ಸುದ್ದಿ, ಮೈಸೂರು

ದಸರಾ ಮಹೋತ್ಸವದ ಅಂಗವಾಗಿ ಯುವ ಸಮೂಹದ ಆಕರ್ಷಣೆಯಾದ 'ಯುವ ದಸರಾ'ವನ್ನು ಅಕ್ಟೋಬರ್ 18ರಿಂದ ಅಕ್ಟೋಬರ್ 21ರವರೆಗೆ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಸಲಾಗುತ್ತದೆ ಎಂದು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಮಾಹಿತಿ ನೀಡಿದರು.



ಅರಮನೆ ಮಂಡಳಿ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ವರ್ಷ 6 ದಿನ ಯುವ ದಸರಾ ನಡೆಸಲಾಗುತ್ತಿತ್ತು. ಈ ವರ್ಷ 4 ದಿನಗಳ ಕಾಲ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ ಮಹದೇವಪ್ಪ ಅವರು ಯುವ ದಸರಾ ಉದ್ಘಾಟನೆ ನೆರವೇರಿಸಲಿದ್ದಾರೆ. ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಂಜೆ 6.30ರಿಂದ ರಾತ್ರಿ 10.30ರವರೆಗೆ ಯುವ ದಸರಾ ನಡೆಯಲಿದೆ. ಮೊದಲ ದಿನ ಸಾಧುಕೋಕಿಲ ಮತ್ತು ತಂಡದಿಂದ ಸಂಗೀತದ ರಸದೌತಣ ಇರಲಿದೆ. ಕನ್ನಡ ರ್‍ಯಾಪರ್ ಅಲೋಕ್ ತಂಡದಿಂದ ಸಂಗೀತ ಕಾರ್ಯಕ್ರಮ ಇದೆ. ಬಾಲಿವುಡ್‌ನ ಪ್ರಖ್ಯಾತ ಹಾಡುಗಾರರು ಕೂಡ ಯುವ ದಸರಾದಲ್ಲಿ ಭಾಗಿಯಾಗಲಿದ್ದಾರೆ. ಸ್ಥಳೀಯ ಪ್ರತಿಭೆಗಳಿಗೂ ಈ ಬಾರಿಯ ಯುವ ದಸರಾ ಸಂಭ್ರಮದಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

## ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

2023-24ನೇ ಸಾಲಿನಲ್ಲಿ ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕಿನ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಕೊರೆಸಿಕೊಂಡ ಫಲಾನುಭವಿಗಳಿಗೆ ತೋಟಗಾರಿಕೆ ಇಲಾಖೆಯಿಂದ ಗೋಡಂಬಿ ಬೆಳೆ ಪ್ರದೇಶ ವಿಸ್ತರಣೆಯಲ್ಲಿ ಉಚಿತವಾಗಿ ಗೋಡಂಬಿ ಸಸಿಗಳನ್ನು ನೀಡುವುದರ ಮೂಲಕ ನಿರ್ವಹಣೆಗಾಗಿ ಸಹಾಯಧನ ಹಾಗೂ ಹನಿ ನೀರಾವರಿಗೆ ಸಹಾಯಧನ ನೀಡಲಾಗುವುದೆಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಸುರೇಶ ವಿ.ಕುಂಬಾರ ತಿಳಿಸಿದ್ದಾರೆ.

ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕುಗಳಲ್ಲಿ, ಕೆಂಪು ಮಣ್ಣು ಪ್ರದೇಶಗಳಲ್ಲಿ ಕಡಿಮೆ ನೀರು, ಅಧಿಕ ಲಾಭ ತರುವ ಗಿ-4 ಎಂಬ ಗೋಡಂಬಿ ತಳಿ ಸೂಕ್ತವಾಗಿದ್ದು, ಇಲಾಖೆಯಿಂದ ಉಚಿತವಾಗಿ ಕಸಿ ಸಸಿಗಳನ್ನು ವಿತರಿಸಲಾಗುತ್ತಿದೆ. ಕೊಳವೆ ಬಾವಿಯಲ್ಲಿ ಕಡಿಮೆ ನೀರು ಇದ್ದರೂ ಹನಿ ನೀರಾವರಿ ಮೂಲಕ ಅಧಿಕ ಪ್ರದೇಶಕ್ಕೆ ನೀರನ್ನು ಉಣಿಸಬಹುದಾಗಿದೆ. ಇದಕ್ಕೂ ಸಹ ಸಹಾಯಧನ ನೀಡಲಾಗುವುದು.

ಆಸಕ್ತ ರೈತರು ಅರ್ಜಿಯೊಂದಿಗೆ ಫೋಟೋ, ಉತಾರಾ, ಖಾತೆ ಉತಾರಾ, ಬೆಳೆ ದೃಢೀಕರಣ ಪತ್ರ, ಮಣ್ಣು ಮತ್ತು ನೀರಿನ ಪರೀಕ್ಷೆ, 20 ರೂಪಾಯಿ ಛಾಪಾ ಕಾಗದದಲ್ಲಿ ದೃಢೀಕರಣ ಪತ್ರದೊಂದಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಗೆ ಸಲ್ಲಿಸಲು ಸುರೇಶ ಕುಂಬಾರ ಪ್ರಕಟಣೆ ಮೂಲಕ ವಿನಂತಿಸಿಕೊಂಡಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka